ವಿಷಯಾನುಕ್ರಮಣಿಕೆ

# ಮೂಲರಾಮಾಯಣಮ್

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
1999

ಅಧ್ಯಾತ್ಮಗ್ರಂಥಾವಳಿ

# ಮೂಲರಾಮಾಯಣಮ್

(ಭಾವಾರ್ಥ, ಟಿಪ್ಪಣಿಗಳೊಡನೆ)


ಬರೆದವರು :

**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**


ಕ್ರಮಾಂಕ ೧೫೦


ಪ್ರಕಾಶಕರು :

**ಅಧ್ಯಾತ್ಮಪ್ರಕಾಶಕಾರ್ಯಾಲಯ,**

ಹೊಳೆನರಸೀಪುರ

1999

# ಮುನ್ನುಡಿ

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಕನ್ನಡಕ್ಕೆ ಅನುವಾದಿಸಿ ಅನುಗ್ರಹಿಸಿರುವ ಈ ಮೂಲರಾಮಾಯಣಪುಸ್ತಕವನ್ನು ರಾಮಭಕ್ತರ ಉಪಯೋಗಕ್ಕಾಗಿ ಪ್ರಕಟಿಸಲಾಗಿದೆ.

ಶ್ರೀಶ್ರೀಗಳವರು ಪೂರ್ವಾಶ್ರಮದಲ್ಲಿ ಶ್ರೀಮದ್ರಾಮಾಯಣ ಪಾರಾಯಣ, ರಾಮಮಂತ್ರಜಪಾದ್ಯನುಷ್ಠಾನಗಳಿಂದ ಸ್ಫೂರ್ತಿಯನ್ನು ಹೊಂದಿದ ಮಹನೀಯರು. ಶ್ರೀ ಗೋಂದಾವಲೀ ಬ್ರಹ್ಮಚೈತನ್ಯಮಹಾರಾಜರಂಥ ರಾಮೋಪಾಸಕರ ಸಂಸರ್ಗ ಸಹವಾಸಗಳಿಂದ ತಮ್ಮ ಜೀವನವನ್ನು ರಾಮಭಕ್ತಿಮಯವಾಗಿ ಮಾಡಿಕೊಂಡಂಥ ಪುಣ್ಯಪುರುಷರು. ಆಬಾಲವೃದ್ಧರಾದಿಯಾಗಿ ಸ್ತ್ರೀಪುರುಷರೆಲ್ಲರೂ ರಾಮಾಯಣವನ್ನು ಒಂದಿಷ್ಟಾದರೂ ಪಠನಮಾಡಿ ಕೃತಾರ್ಥರಾಗಬೇಕೆಂಬುದೇ ಶ್ರೀಶ್ರೀಗಳವರ ಇಚ್ಛೆ. ಅದಕ್ಕಾಗಿ ಈ ಪುಸ್ತಕವನ್ನು ಗುರುಗಳ ಆಜ್ಞೆಯಂತೆ ಪ್ರಕಟಿಸಿದ್ದೇವೆ.

ಕಾರ್ಯಾಲಯದಲ್ಲಿ ಇತ್ತೀಚೆಗೆ **'ಅಧ್ಯಾತ್ಮ ರಾಮಾಯಣ'**ವನ್ನು ಸಂಪೂರ್ಣವಾಗಿ ಕನ್ನಡಿಸಿ ಭಾವಾರ್ಥಸಮೇತ ಪ್ರಕಟಿಸಲಾಗಿದೆ. ಪ್ರಾರಂಭಿಕ ಓದುಗರಿಗಾಗಿ ಅದೇ ರಾಮಾಯಣದ ಬಾಲಕಾಂಡ-೧ನೆಯ ಸರ್ಗವನ್ನು **'ಶ್ರೀರಾಮ ಹೃದಯ'** ಎಂಬ ಹೆಸರಿನಿಂದ ಬೇರೆಯಾಗಿ ಪ್ರಕಟಿಸಿದೆ. ಮತ್ತು ಉತ್ತರಕಾಂಡ ಐದನೆಯ ಸರ್ಗವನ್ನೂ **'ರಾಮಗೀತೆ'** ಎಂಬ ಹೆಸರಿನಿಂದ ಪ್ರತ್ಯೇಕವಾಗಿ ಪ್ರಕಟಿಸಿದೆ. ಇವುಗಳನ್ನೂ ವಾಚಕರು ಓದಬೇಕಾಗಿ ಪ್ರಾರ್ಥನೆ.

ಈ ಗ್ರಂಥದ ಮೂರನೆಯ ಮುದ್ರಣದ ಪ್ರತಿಗಳೆಲ್ಲವೂ ಮಾರಾಟವಾಗಿ ಬಿಟ್ಟದ್ದರಿಂದ ಈಗ ನಾಲ್ಕನೆಯ ಮುದ್ರಣವನ್ನು ಹೊರತಂದಿದೆ. ವಾಚಕರು ಈ ಗ್ರಂಥವನ್ನೂ ಸ್ವಾಗತಿಸುವರೆಂದು ಆಶಿಸಿದೆ.

2-9-1999 **ಇತಿ-**

ಹೊಳೆನರಸೀಪುರ, **ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿ,**

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ವಿಷಯಾನುಕ್ರಮಣಿಕೆ

ಅವತರಣಿಕೆ

ವಾಲ್ಮೀಕಿಗಳ ಪ್ರಶ್ನೆ

ನಾರದರ ಉತ್ತರ

ಶ್ರೀರಾಮನ ಕಲ್ಯಾಣಗುಣಗಳು

ರಾಮನ ಯುವರಾಜ್ಯಾಭಿಷೇಕಕ್ಕೆ ಪ್ರಯತ್ನ

ಕೈಕೇಯಿಯು ವರವನ್ನು ಕೇಳಿದ್ದು

ರಾಮನು ವನವಾಸಕ್ಕೆ ತೆರಳಿದ್ದು

ಸೀತಾದೇವಿಯು ರಾಮನನ್ನು ಹಿಂಬಾಲಿಸಿದ್ದು

ಗುಹಸಂಗಮ

ಭರತನಿಗೆ ಪಾದುಕಾಪ್ರದಾನ

ದಂಡಕಾಪ್ರವೇಶ

ಋಷಿಗಳಿಗೆ ಅಭಯಪ್ರದಾನ

ಶೂರ್ಪಣಖಿಯ ವಿರೂಪಕರಣ,
ಖರದೂಷಣಾದಿಗಳ ಸಂಹಾರ

ರಾವಣನು ಸೀತೆಯನ್ನು ಅಪಹರಿಸಿದ್ದು

ರಾಮನು ಶಬರಿಯ ಸತ್ಕಾರವನ್ನು ಸ್ವೀಕರಿಸಿದ್ದು
ಸುಗ್ರೀವಸಖ್ಯ
ವಾಲಿಯ ವಧೆ
ಸೀತಾನ್ವೇಷಣ
ಹನುಮಂತನು ಸಮುದ್ರವನ್ನು ದಾಟಿ ಸೀತೆಯನ್ನು ಕಂಡದ್ದು
ಲಂಕೆಯನ್ನು ಸುಟ್ಟು ಸೀತಾವೃತ್ತಾಂತವನ್ನು ತಂದದ್ದು
ಸಮುದ್ರವನ್ನು ದಾಟಿ ರಾವಣನನ್ನು ಕೊಂದು ಸೀತೆಯನ್ನು ಪಡೆದುಕೊಂಡದ್ದು
ಅಗ್ನಿಪರೀಕ್ಷೆಯಿಂದ ಸೀತೆಯು ಪರಿಶುದ್ಧಳೆಂದು ನಿಶ್ಚಿತವಾದದ್ದು
ವಿಭೀಷಣನಿಗೆ ಪಟ್ಟಾಭಿಷೇಕವನ್ನು ಮಾಡಿ ಅಯೋಧ್ಯೆಗೆ ಹೊರಟದ್ದು
ಭರದ್ವಾಜಾಶ್ರಮದ ಮಾರ್ಗದಿಂದ ನಂದಿಗ್ರಾಮಕ್ಕೆ ಪ್ರಯಾಣ
ಮತ್ತೆ ರಾಜ್ಯಪ್ರಾಪ್ತಿ
ರಾಮರಾಜ್ಯದ ಪ್ರಶಂಸೆ
ರಾಮನು ಮುಂದೆ ಬ್ರಹ್ಮಲೋಕಕ್ಕೆ ತೆರಳುವನು
ರಾಮಾಯಣಕಥೆಯ ಮಾಹಾತ್ಮ್ಯ
ಶ್ರೀರಾಮಮಂಗಳಾಶಂಸನಸ್ತೋತ್ರ
ಕೆಲವು ಸ್ತೋತ್ರ, ಪದ, ಪದ್ಯ - ಗ್ರಂಥಗಳು

# ಪೀಠಿಕೆ

(ಶ್ರೀ ಶ್ರೀಗಳವರು)

ಶ್ರೀಮದ್ರಾಮಾಯಣವು ಮಹಾತಪಸ್ವಿಗಳಾದ ವಾಲ್ಮೀಕಿಗಳಿಂದ ರಚಿತವಾದ ಆದಿಕಾವ್ಯವು. ಇದರಲ್ಲಿ ಮರ್ಯಾದಾಪುರುಷೋತ್ತಮನೂ ಮಹಾವಿಷ್ಣುವಿನ ಅವತಾರವೂ ಆದ ಶ್ರೀರಾಮಚಂದ್ರನ ಪುಣ್ಯಚರಿತ್ರೆಯು ಇರುತ್ತದೆ. ವಾಲ್ಮೀಕಿಗಳು ನಾರದರಿಂದ ಶ್ರೀರಾಮನ ಕಲ್ಯಾಣಗುಣಗಳ ಪ್ರಶಂಸೆಯನ್ನು ಕೇಳಿತಿಳಿದುಕೊಂಡ ಮೇಲೆ ಬ್ರಹ್ಮದೇವರ ವರಪ್ರಸಾದದಿಂದ ಶ್ರೀರಾಮಚರಿತ್ರೆಯ ಅಂತರಂಗವೆಲ್ಲವನ್ನೂ ಅರಿತುಕೊಂಡು ಅನುಗ್ರಹಿಸಿರುವ ಪರಮಪವಿತ್ರಗ್ರಂಥವಿದು.

ಧರ್ಮವನ್ನೂ ಸತ್ಯವನ್ನೂ ಉದ್ಧಾರಮಾಡುವದಕ್ಕೆಂದೇ ಅವತರಿಸಿದವನು ಶ್ರೀರಾಮಚಂದ್ರನು. ಲಕ್ಷ್ಮಣನು ಇಂದ್ರಜಿತುವನ್ನು ಸಂಹಾರಮಾಡುವಾಗ **''ಧರ್ಮಾತ್ಮಾ ಸತ್ಯಸನ್ಧಶ್ಚ ರಾಮೋ ದಾಶರಥಿರ್ಯದಿ । ಪೌರುಷೇ ಚಾಪ್ರತಿದ್ವನ್ದ್ವಃ ಶರೈನಂ ಜಹಿ ರಾವಣಿಮ್''** 'ಶ್ರೀದಾಶರಥಿಯು ಧರ್ಮಾತ್ಮನೂ ಸತ್ಯಸಂಧನೂ ವೀರ್ಯದಲ್ಲಿ ಎದುರಾಳಿಯಿಲ್ಲದವನೂ ಆಗಿರುವದು ನಿಜವಾದರೆ, ಎಲೆ ಬಾಣವೆ, ಈ ರಾವಣನ ಮಗನನ್ನು ಕೊಂದುಹಾಕು' ಎಂದು ಕೇಳಿಕೊಂಡಿರುತ್ತಾನೆ. ವಾಲ್ಮೀಕಿಗಳು ರಚಿಸಿರುವ ಈ ಶ್ಲೋಕವೇ ರಾಮಾಯಣಕ್ಕೆ ಮೂಲಮಂತ್ರವಾಗಿರುತ್ತದೆ. 'ಸತ್ಯವನ್ನು ಹೇಳಬೇಕು, ಧರ್ಮವನ್ನು ಆಚರಿಸಬೇಕು' ಎಂಬಿದೇ ವೇದೋಪದೇಶದ ಸಾರ; ಆದ್ದರಿಂದ ರಾಮಾಯಣವೂ ವೇದಸಮ್ಮತವಾಗಿರುತ್ತದೆ.

ಪುಸ್ತಕ, ರಾಮಮೂರ್ತಿಯ ಪೂಜಾದ್ಯುಪಚಾರಗಳು, ನ್ಯಾಸಾದಿಕ್ರಮ-ಇವುಗಳಿಲ್ಲದಿದ್ದರೂ ಪವಿತ್ರವಾದ ಶ್ರೀರಾಮಮಂದಿರ, ತುಲಸೀಕಟ್ಟೆ - ಮುಂತಾದ ಸ್ಥಳದಲ್ಲಿ ಕುಳಿತು ಬಾಲಕಾಂಡದ ಮೊದಲನೆಯ ಸರ್ಗವಾದ ಸಂಕ್ಷೇಪರಾಮಾಯಣಾಖ್ಯಾನವನ್ನು ಭಕ್ತಿಯಿಂದ ಪಠಿಸುವವರಿಗೆ ಇಹಪರ ಸುಖಗಳು ಯಥಾಧಿಕಾರವಾಗಿ ಲಭಿಸುವವು. ನಾಲ್ಕುವರ್ಣದವರಿಗೂ ಈ ಆಖ್ಯಾನವನ್ನು ಪಠಿಸುವ ಅಧಿಕಾರವುಂಟೆಂದು ವಾಲ್ಮೀಕಿಮುನಿಗಳೇ ಅಪ್ಪಣೆ ಕೊಡಿಸಿರುತ್ತಾರೆ. ಈ ರಾಮಾಯಣಸರ್ಗದ ಪಾರಾಯಣವನ್ನು ಮಾಡಿ ಮಹಾಜನರು ಕಲಿಕಲ್ಮಷವನ್ನು ನಾಶಗೊಳಿಸಿಕೊಂಡು ಕೃತಾರ್ಥರಾಗಲಿ!

ಸಾಧಾರಣಸಂವತ್ಸರದ ಚೈತ್ರ ಶುದ್ಧ - ನವಮೀ **ನಾರಾಯಣ !**

15-4-1970 ಲೇಖಕರು

ಹೊಳೆನರಸೀಪುರ

|| ಓಂ ||

|| ಶ್ರೀದಿಗ್ವಿಜಯರಾಮೋ ವಿಜಯತೇ ||

# ಮೂಲರಾಮಾಯಣಮ್

## ಅವತರಣಿಕೆ

**ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।**
**ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥ ೧ ॥**

೧. ತಪಸ್ವಿಯಾದ ವಾಲ್ಮೀಕಿಯು ತಪಸ್ಸು, ಅಧ್ಯಯನ - ಇವುಗಳಲ್ಲಿ ನಿರತನೂ ವಾಗ್ವಿದರಲ್ಲಿ ಶ್ರೇಷ್ಠನೂ ಆದ ನಾರದಮುನಿವರ್ಯನನ್ನು ವಿನಯದಿಂದ ಹೀಗೆಂದು ಕೇಳಿದನು.

( ಈ ಸಂವಾದವು ಸಂಯಮಿಗಳಾದ ಇಬ್ಬರು ಋಷಿಗಳಲ್ಲಿ ನಡೆದದ್ದು. ಇಬ್ಬರೂ ತಪಸ್ವಿಗಳು. ವಾಲ್ಮೀಕಿಯು ಲೋಕಹಿತಾರ್ಥವಾದ ಪ್ರಶ್ನೆಯನ್ನೇ ಕೇಳಿರುತ್ತಾನೆ. ನಾರದನು ಹಿತಮಿತವಾದ ಲೋಕಕಲ್ಯಾಣಕರವಾದ ತತ್ತ್ವವನ್ನು ಅರಿತು ಹೇಳುವಾತನು.)

### ವಾಲ್ಮೀಕಿಗಳ ಪ್ರಶ್ನೆ

**ಕೋ ನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್।**
**ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥ ೨ ॥**
**ಚಾರಿತ್ರೇಣ ಕೋ ಯುಕ್ತಃ ಸರ್ವಭೂತೇಷು ಕೋ ಹಿತಃ ।**
**ವಿದ್ವಾನ್ ಕಃ ಕಃ ಸಮರ್ಥಶ್ಚ ಕಶ್ಚೈಕಪ್ರಿಯದರ್ಶನಃ ॥ ೩ ॥**
**ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ ಕೋಽನಸೂಯಕಃ ।**
**ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ ॥ ೪ ॥**
**ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ।**
**ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂವಿಧಂ ನರಮ್ ॥ ೫ ॥**

೨-೫. (ಮುನಿವರ್ಯನೆ), ಈಗ ಲೋಕದಲ್ಲಿ ಸಕಲಗುಣಸಂಪನ್ನನು ಯಾರು ? ಮತ್ತು ವೀರ್ಯವಂತನೂ ಧರ್ಮವನ್ನು ಬಲ್ಲವನೂ ಮಾಡಿದ

ಉಪಕಾರವನ್ನು ಮರೆಯದಿರುವವನೂ ಸತ್ಯವನ್ನೇ ನುಡಿಯುವಾತನೂ ಅವಲಂಬಿಸಿದ ನಿಯಮದಲ್ಲಿ ತಪ್ಪದೆ ನಿಂತಿರುವವನೂ ಯಾರು ? ಸರಿಯಾದ ನಡತೆಯಿಂದ ಕೂಡಿರುವಾತನು ಯಾರು ? ಸರ್ವಪ್ರಾಣಿಗಳ ವಿಷಯದಲ್ಲಿಯೂ ಹಿತವನ್ನೇ ಕೋರುವವನು ಯಾರು ? (ಎಲ್ಲಾ ವಿಷಯದಲ್ಲಿಯೂ) ವಿದ್ವಾಂಸನಾಗಿರುವವನು ಯಾರು ? ಸಮರ್ಥನು ಯಾರು ? ಯಾವನೊಬ್ಬನೇ ನೋಡುವದಕ್ಕೆ ಸಂತೋಷಪ್ರದನಾಗಿ (ಸುಂದರನಾಗಿ) ರುತ್ತಾನೆ ? ಅಂತಃಕರಣ ವನ್ನು ಹಿಡಿತದಲ್ಲಿಟ್ಟುಕೊಂಡಿರುವಾತನು ಯಾರು ? ಸಿಟ್ಟನ್ನು ಗೆದ್ದು ಕೊಂಡಿರುವವನು ಯಾರು ? ಕಾಂತಿಯುಕ್ತನು ಯಾರು ? ಯಾವನು ಯಾರ ವಿಷಯದಲ್ಲಿಯೂ ಅಸೂಯೆಯಿಲ್ಲದವನಾಗಿರುತ್ತಾನೆ ? ಯಾವನಿಗೆ ರೋಷವುಂಟಾದಾಗ ಯುದ್ಧದಲ್ಲಿ ದೇವತೆಗಳೂ ಅಂಜುತ್ತಿರುವರು ? ಮಹರ್ಷಿಯೆ, ನಾನು ಇದನ್ನು ಕೇಳಿ ತಿಳಿದುಕೊಳ್ಳಬೇಕೆಂದು ಬಯಸುತ್ತಿದ್ದೇನೆ. ಈ ವಿಷಯದಲ್ಲಿ ನನಗೆ ಹೆಚ್ಚಿನ ಕುತೂಹಲವುಂಟಾಗುತ್ತಿದೆ. ಇಂಥ ಮನುಷ್ಯನನ್ನು ಅರಿಯುವದಕ್ಕೆ ನೀನೇ ಸಮರ್ಥನು.

(ಇಲ್ಲಿ ಹೇಳಿರುವ ಕಲ್ಯಾಣಗುಣಗಳೆಲ್ಲ ದೇವತೆಗಳಲ್ಲಾಗಲಿ ಋಷಿಗಳಲ್ಲಾಗಲಿ ಯಾವನೊಬ್ಬನಲ್ಲಿಯೂ ಇರುವ ಸಂಭವವು ಕಾಣುತ್ತಿಲ್ಲ. ಮನುಷ್ಯರೊಳಗೆ ಇಂಥವನು ಯಾವನಾದರೂ ಇದಾನೆಯೆ ? ನೀನು ತ್ರಿಲೋಕಸಂಚಾರಿಯಾದ್ದರಿಂದ ಇಂಥವನು ಇರುವದಾದರೆ ನಿನಗೊಬ್ಬನಿಗೇ ತಿಳಿದಿರಬೇಕು. ಆದ್ದರಿಂದ ಕೇಳುತ್ತೇನೆ - ಎಂಬ ಭಾವದಿಂದ 'ಏವಂವಿಧಂ ನರಮ್' (ಇಂಥ ಮನುಷ್ಯನನ್ನು) ಎಂಬ ಮಾತನ್ನು ವಾಲ್ಮೀಕಿಗಳು ಪ್ರಯೋಗಿಸಿರುತ್ತಾರೆ.)

## ನಾರದರ ಉತ್ತರ

**ಶ್ರುತ್ವಾ ಚೈತತ್ತ್ರಿಲೋಕಜ್ಞೋ ವಾಲ್ಮೀಕೇರ್ನಾರದೋ ವಚಃ ।**
**ಶ್ರೂಯತಾಮಿತಿ ಚಾಮನ್ತ್ರ್ಯ ಪ್ರಹೃಷ್ಟೋ ವಾಕ್ಯಮಬ್ರವೀತ್ ॥ ೬ ॥**

೬. ಮೂರು ಲೋಕಗಳನ್ನೂ ಬಲ್ಲ ನಾರದನು ವಾಲ್ಮೀಕಿಯ ಈ ಮಾತನ್ನು ಕೇಳಿ ಪರಮಹರ್ಷದಿಂದ 'ಕೇಳಬೇಕು !' ಎಂದು (ವಾಲ್ಮೀಕಿಯನ್ನು) ಸಂಬೋಧಿಸಿ ಈ ಮಾರುತ್ತರವನ್ನು ನುಡಿದನು.

# ಶ್ರೀರಾಮನ ಕಲ್ಯಾಣಗುಣಗಳು

**ಬಹವೋ ದುರ್ಲಭಾಶ್ಚೈವ ಯೇ ತ್ವಯಾ ಕೀರ್ತಿತಾ ಗುಣಾಃ ।**
**ಮುನೇ ವಕ್ಷ್ಯಾಮ್ಯಹಂ ಬುದ್ಧ್ವಾ ತೈರ್ಯುಕ್ತಃ ಶ್ರೂಯತಾಂ ನರಃ॥ ೭ ॥**

೭. ಎಲೈ ಮುನಿಯೆ, ನೀನು ಹೇಳಿದ ಗುಣಗಳು ಬಹುವಾಗಿವೆ, ದುರ್ಲಭವಾಗಿಯೂ ಇರುತ್ತವೆ. ಅವುಗಳಿಂದ ಕೂಡಿದ ಮನುಷ್ಯನನ್ನು ಅರಿತುಕೊಂಡು ಹೇಳುತ್ತಿದ್ದೇನೆ, ಆಲೈಸಿ ಕೇಳು.

**ಇಕ್ಷ್ವಾಕುವಂಶಪ್ರಭವೋ ರಾಮೋ ನಾಮ ಜನೈಃ ಶ್ರುತಃ ।**
**ನಿಯತಾತ್ಮಾ ಮಹಾವೀರ್ಯೋ ದ್ಯುತಿಮಾನ್ ಧೃತಿಮಾನ್ ವಶೀ ॥ ೮ ॥**
**ಬುದ್ಧಿಮಾನ್ ನೀತಿಮಾನ್ ವಾಗ್ಮೀ ಶ್ರೀಮಾನ್ ಶತ್ರುನಿಬರ್ಹಣಃ ।**
**ವಿಪುಲಾಂಸೋ ಮಹಾಬಾಹುಃ ಕಮ್ಬುಗ್ರೀವೋ ಮಹಾಹನುಃ ॥ ೯ ॥**
**ಮಹೋರಸ್ಕೋ ಮಹೇಷ್ವಾಸೋ ಗೂಢಜತ್ರುರರಿಂದಮಃ ।**
**ಆಜಾನುಬಾಹುಃ ಸುಶಿರಾಃ ಸುಲಲಾಟಃ ಸುವಿಕ್ರಮಃ ॥ ೧೦ ॥**
**ಸಮಃ ಸಮವಿಭಕ್ತಾಙ್ಗಃ ಸ್ನಿಗ್ಧವರ್ಣಃ ಪ್ರತಾಪವಾನ್ ।**
**ಪೀನವಕ್ಷಾ ವಿಶಾಲಾಕ್ಷೋ ಲಕ್ಷ್ಮೀವಾನ್ ಶುಭಲಕ್ಷಣಃ ॥ ೧೧ ॥**

೮-೧೧. ಇಕ್ಷ್ವಾಕುವಿನ ವಂಶದಲ್ಲಿ ಜನಿಸಿ ರಾಮನೆಂಬ ಹೆಸರಿನಿಂದ ಜನರಲ್ಲಿ ವಿಖ್ಯಾತನಾಗಿರುತ್ತಾನೆ. ಮನಸ್ಸನ್ನು ವಶದಲ್ಲಿಟ್ಟುಕೊಂಡು, ಮಹಾವೀರ್ಯವಂತನೂ ಕಾಂತಿಯುಕ್ತನೂ ಧೈರ್ಯಶಾಲಿಯೂ ಜಿತೇಂದ್ರಿಯನೂ ಬುದ್ಧಿವಂತನೂ ನೀತಿವಂತನೂ ವಾಕ್ಚತುರನೂ ಶೋಭಾವಂತನೂ ಶತ್ರುಸಂಹಾರಕನೂ ಆಗಿರುವನವನು. ಅವನ ಹೆಗಲುಗಳು ವಿಶಾಲವಾಗಿವೆ, ಭುಜಗಳು ನೀಳವಾಗಿವೆ, ಅವನ ಕಂಠವು ಶಂಖದಂತೆ ಇದೆ ; ಕೆನ್ನೆಗಳು ಅಗಲವಾಗಿವೆ ; ಎದೆಯು ವಿಶಾಲವಾಗಿದೆ, ಧನುಸ್ಸು ದೊಡ್ಡದು, ಕತ್ತಿನ ಕೆಳಗಣ ಎಲುಬು (ಎದೆಗೂಡು) ಮುಚ್ಚಿಕೊಂಡಿರುವದು. ಅವನು ಶತ್ರುಗಳನ್ನು ದಮನ ಮಾಡುವಂಥವನು, ನೀಳಾದ ತೋಳುಗಳುಳ್ಳವನು, ಶಿರಸ್ಸು ಉತ್ತಮವಾಗಿದೆ, ಹಣೆಯು ಅಗಲವಾಗಿದೆ, ನಡತೆಯು ಮನೋಹರವಾಗಿದೆ. ಶರೀರವು ಎತ್ತರವೂ ಅಲ್ಲದೆ ಕುಳ್ಳೂ ಅಲ್ಲದೆ ಸಮಪ್ರಮಾಣ, ಅವಯವಗಳು ಸರಿಯಾಗಿ

ಹೊಂದಿಕೊಂಡು ಪಿಂಗಡವಾಗಿವೆ, ಎಣ್ಣೆಗೆಂಪಿನ ಬಣ್ಣದವನು, ಪ್ರತಾಪವಂತನ ವನು, ತುಂಬಿದ ಎದೆಯವನು, ದೊಡ್ಡಕಣ್ಣುಗಳುಳ್ಳವನೂ ಶೋಭಾಯಮಾನ ಸ್ವರೂಪನೂ ಶುಭಲಕ್ಷಣಗಳುಳ್ಳವನೂ ಆಗಿರುತ್ತಾನೆ.

(ಈ ಭಾಗದಲ್ಲಿ ಶ್ರೀರಾಮನ ಮನೋಹರಶರೀರದ ವರ್ಣನೆಯಿದೆ.)

**ಧರ್ಮಜ್ಞಃ ಸತ್ಯಸನ್ಧಶ್ಚ ಪ್ರಜಾನಾಂ ಚ ಹಿತೇ ರತಃ ।**
**ಯಶಸ್ವೀ ಜ್ಞಾನಸಂಪನ್ನಃ ಶುಚಿರ್ವಶ್ಯಃ ಸಮಾಧಿಮಾನ್ ॥ ೧೨ ॥**
**ಪ್ರಜಾಪತಿಸಮಃ ಶ್ರೀಮಾನ್ ಧಾತಾ ರಿಪುನಿಷೂದನಃ ।**
**ರಕ್ಷಿತಾ ಜೀವಲೋಕಸ್ಯ ಧರ್ಮಸ್ಯ ಪರಿರಕ್ಷಿತಾ ॥ ೧೩ ॥**
**ರಕ್ಷಿತಾ ಸ್ವಸ್ಯ ಧರ್ಮಸ್ಯ ಸ್ವಜನಸ್ಯ ಚ ರಕ್ಷಿತಾ ।**
**ವೇದವೇದಾಙ್ಗತತ್ತ್ವಜ್ಞೋ ಧನುರ್ವೇದೇ ಚ ನಿಷ್ಠಿತಃ ॥ ೧೪ ॥**
**ಸರ್ವಶಾಸ್ತ್ರಾರ್ಥತತ್ತ್ವಜ್ಞಃ ಸ್ಮೃತಿಮಾನ್ ಪ್ರತಿಭಾನವಾನ್ ।**
**ಸರ್ವಲೋಕಪ್ರಿಯಃ ಸಾಧುರದೀನಾತ್ಮಾ ವಿಚಕ್ಷಣಃ ॥ ೧೫ ।**
**ಸರ್ವದಾಭಿಗತಃ ಸದ್ಭಿಃ ಸಮುದ್ರ ಇವ ಸಿನ್ಧುಭಿಃ ।**
**ಆರ್ಯಃ ಸರ್ವಸಮಶ್ಚೈವ ಸದೈವ ಪ್ರಿಯದರ್ಶನಃ ॥ ೧೬ ॥**
**ಸ ಚ ಸರ್ವಗುಣೋಪೇತಃ ಕೌಸಲ್ಯಾನನ್ದವರ್ಧನಃ ।**
**ಸಮುದ್ರ ಇವ ಗಾಮ್ಭೀರ್ಯೇ ಧೈರ್ಯೇಣ ಹಿಮವಾನಿವ ॥ ೧೭ ॥**
**ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ ಪ್ರಿಯದರ್ಶನಃ ।**
**ಕಾಲಾಗ್ನಿಸದೃಶಃ ಕ್ರೋಧೇ ಕ್ಷಮಯಾ ಪೃಥಿವೀಸಮಃ ॥ ೧೮ ॥**
**ಧನದೇನ ಸಮಸ್ತ್ಯಾಗೇ ಸತ್ಯೇ ಧರ್ಮ ಇವಾಪರಃ ।**

೧೨-೧೮ ೧/೨. ಧರ್ಮವನ್ನು ಬಲ್ಲಾತನು, ಸತ್ಯಪ್ರತಿಜ್ಞನು, ಪ್ರಜೆಗಳಿಗೆ ಹಿತವನ್ನು ಮಾಡುವದರಲ್ಲಿಯೇ ರತನಾದವನು, ಯಶಸ್ವಿಯೂ ಜ್ಞಾನ ಸಂಪನ್ನನೂ ಶುಚಿಯಾಗಿರುವಾತನೂ ಆಗಿದ್ದಾನೆ. ಇಂದ್ರಿಯಗಳನ್ನು ವಶದಲ್ಲಿಟ್ಟು ಕೊಂಡಿರುವಾತನು, ಮನಸ್ಸನ್ನು ಏಕಾಗ್ರತೆಯಲ್ಲಿಟ್ಟುಕೊಂಡಿರು ವಾತನು. ಪ್ರಜಾ ಪತಿಗೆ ಸಮಾನವಾದ ಜ್ಞಾನೈಶ್ವರ್ಯಸಂಪನ್ನನು, ಶ್ರೀಯುಕ್ತನು, ಪೋಷಕನು, ಶತ್ರುನಾಶಕನು, ಜೀವರುಗಳನ್ನು ರಕ್ಷಿಸುವಾತನು, ಧರ್ಮವನ್ನು ಎಲ್ಲಾ ಬಗೆ

ಯಿಂದ ರಕ್ಷಿಸುವಾತನು. ತನ್ನ ಧರ್ಮವನ್ನು ಕಾಪಾಡಿಕೊಳ್ಳುವಾತನು, ತನ್ನವರನ್ನು ರಕ್ಷಣೆಮಾಡುವಾತನು. ವೇದಗಳ ಮತ್ತು ವೇದಾಂಗಗಳ ತತ್ತ್ವವನ್ನು ಬಲ್ಲವನು, ಧನುರ್ವೇದದಲ್ಲಿ ಪ್ರವೀಣನು, ಸರ್ವಶಾಸ್ತ್ರಗಳೂ ಪ್ರತಿಪಾದಿಸುವ ವಿಷಯಗಳ ತತ್ತ್ವವನ್ನು ಬಲ್ಲಾತನು, ಸ್ಮರಣಶಕ್ತಿಸಂಪನ್ನ, ಚುರುಕಾದ ಬುದ್ಧಿಯುಳ್ಳಾತನು, ಸಮಸ್ತ ಜನರಿಗೂ ಪ್ರಿಯನು, ಸನ್ಮಾರ್ಗಸ್ಥನು, ಉದಾರವಾದ ಹೃದಯವುಳ್ಳಾತನು, ಎಲ್ಲದರಲ್ಲಿಯೂ ಜಾಣನು. ನದಿಗಳು ಯಾವಾಗಲೂ ಬಂದು ಸೇರುತ್ತಿರುವ ಸಮುದ್ರದಂತೆ ಯಾವಾಗಲೂ ಸತ್ಪುರುಷರಿಂದ ಸುತ್ತುವರೆಯಲ್ಪಟ್ಟವನು, ಆರ್ಯಗುಣವುಳ್ಳಾತನು, ಸರ್ವರ ವಿಷಯದಲ್ಲಿಯೂ ಸಮವಾಗಿ ವರ್ತಿಸುತ್ತಿರುವಾತನು, ಯಾವಾಗಲೂ ಪ್ರಿಯನಾಗಿ ಕಾಣುವಾತನು, ಕೌಸಲ್ಯೆಗೆ ಆನಂದವನ್ನು ಬೆಳೆಯಿಸುತ್ತಿರುವ ಆ ಶ್ರೀರಾಮನು ಸರ್ವಗುಣಗಳಿಂದಲೂ ಕೂಡಿದವನಾಗಿ ಗಾಂಭೀರ್ಯದಲ್ಲಿ ಸಮುದ್ರದಂತೆಯೂ ಧೈರ್ಯದಲ್ಲಿ ಹಿಮಾಚಲದಂತೆಯೂ ಇರುವನು ; ವೀರ್ಯದಲ್ಲಿ ವಿಷ್ಣುವಿಗೆ ಸಮಾನನಾಗಿರುವವನು ; ಚಂದ್ರನಂತೆ ಆಹ್ಲಾದಕರನಾಗಿರುವವನು, ಸಿಟ್ಟಿನಲ್ಲಿ ಪ್ರಲಯಕಾಲದ ಅಗ್ನಿಯಂತೆಯೂ ಕ್ಷಮಾಗುಣದಲ್ಲಿ ಭೂಮಿಯಂತೆಯೂ ತ್ಯಾಗದಲ್ಲಿ ಕುಬೇರನಂತೆಯೂ ಸತ್ಯದಲ್ಲಿ ಎರಡನೆಯ ಧರ್ಮರಾಜನಂತೆಯೂ ಇರುವನು.

(ಈ ಭಾಗದಲ್ಲಿ ಶ್ರೀರಾಮಚಂದ್ರನ ಬುದ್ಧಿ, ತತ್ತ್ವಜ್ಞಾನ, ಹೃದಯವೈಶಾಲ್ಯ, ನೀತಿ - ಮುಂತಾದ ಉದಾತ್ತಗುಣಗಳ ವರ್ಣನೆಯಿದೆ. 'ಆತನು ಸಾಕ್ಷಾದ್ವಿಷ್ಣುವಿನ ಅವತಾರವೇ' ಎಂದು ರಾಮಾಯಣದ ಕೊನೆಯಲ್ಲಿ ಪ್ರಕಟವಾಗುವದಿದೆಯಾದರೂ ಇಲ್ಲಿ ಮನುಷ್ಯ ರೂಪದಿಂದಲೇ ಅವನನ್ನು ವರ್ಣಿಸುತ್ತಿರುವದರಿಂದ ವಿಷ್ಣುವಿಗೆ ಸಮಾನವಾದ ವೀರ್ಯವುಳ್ಳಾತನು - ಎಂದು ಬಣ್ಣಿಸಿದೆ. ಮನುಷ್ಯ ಮಾತ್ರಕ್ಕೆ ಇಷ್ಟು ಗುಣಗಳ ರಾಶಿ ಒಟ್ಟುಗೂಡಿರುವದು ಸಂಭಾವಿತವಲ್ಲವಾದ್ದರಿಂದ ಆತನು ದೈವಿಕಪುರುಷನಾಗಿರಬೇಕೆಂಬ ಕಲ್ಪನೆಯು ಇಷ್ಟು ವರ್ಣನೆಯಿಂದಲೇ ಸಹೃದಯರಾದ ಓದುಗರ ಮನಸ್ಸಿನಲ್ಲಿ ಸ್ವಾಭಾವಿಕವಾಗಿ ಮಿಂಚುತ್ತದೆ.)

## ರಾಮನ ಯುವರಾಜ್ಯಾಭಿಷೇಕಕ್ಕೆ ಪ್ರಯತ್ನ

**ತಮೇವಂಗುಣಸಂಪನ್ನಂ ರಾಮಂ ಸತ್ಯಪರಾಕ್ರಮಮ್**
**ಜ್ಯೇಷ್ಠಂ ಶ್ರೇಷ್ಠಗುಣೈರ್ಯುಕ್ತಂ ಪ್ರಿಯಂ ದಶರಥಃ ಸುತಮ್**

**ಪ್ರಕೃತೀನಾಂ ಹಿತೈರ್ಯುಕ್ತಂ ಪ್ರಕೃತಿಪ್ರಿಯಕಾಮ್ಯಯಾ ॥ ೨೦ ॥**
**ಯೌವರಾಜ್ಯೇನ ಸಂಯೋಕ್ತುಮೈಚ್ಛತ್ ಪ್ರೀತ್ಯಾ ಮಹೀಪತಿಃ ।**

೧೯-೨೦ ೧/೨. ಇಂಥ ಗುಣಗಳಿಂದೊಡಗೂಡಿರುವ ಸತ್ಯಪರಾಕ್ರಮನಾಗಿ ಜ್ಯೇಷ್ಠಪುತ್ರನೂ ಶ್ರೇಷ್ಠಗುಣಗಳುಳ್ಳವನೂ ಆಗಿರುವ ಪ್ರಿಯನಾಗಿರುವ ಪುತ್ರನಾದ ರಾಮನನ್ನು ಪ್ರಜೆಗಳ ಹಿತಕಾರಕವಾದ ಕಾರ್ಯಗಳಲ್ಲಿದ್ದನಾದ್ದರಿಂದ ಪ್ರಜೆಗಳಿಗೆ ಪ್ರೀತಿಯುಂಟಾಗಲೆಂಬ ಇಚ್ಛೆಯಿಂದ ಪ್ರೇಮಪೂರ್ವಕವಾಗಿ ಯುವರಾಜಪದವಿಯಲ್ಲಿ ಅಭಿಷಿಕ್ತನನ್ನಾಗಿ ಮಾಡಿಸುವದಕ್ಕೆ ಮಹೀಪತಿಯಾದ ದಶರಥನು ಬಯಸಿದನು.

## ಕೈಕೇಯಿಯು ವರವನ್ನು ಕೇಳಿದ್ದು

**ತಸ್ಯಾಭಿಷೇಕಸಂಭಾರಾನ್ ದೃಷ್ಟ್ವಾ ಭಾರ್ಯಾಽಥ ಕೈಕಯೀ ॥ ೨೧ ॥**
**ಪೂರ್ವಂ ದತ್ತವರಾ ದೇವೀ ವರಮೇನಮಯಾಚತ ।**
**ವಿವಾಸನಂ ಚ ರಾಮಸ್ಯ ಭರತಸ್ಯಾಭಿಷೇಚನಮ್ ॥ ೨೨ ॥**
**ಸ ಸತ್ಯವಚನಾದ್ ರಾಜಾ ಧರ್ಮಪಾಶೇನ ಸಂಯತಃ ।**
**ವಿವಾಸಯಾಮಾಸ ಸುತಂ ರಾಮಂ ದಶರಥಃ ಪ್ರಿಯಮ್ ॥ ೨೩ ॥**

೨೧-೨೩. ಬಳಿಕ ಅವನ ಅಭಿಷೇಕಕ್ಕಾಗಿ ಮಾಡಿದ್ದ ಏರ್ಪಾಡುಗಳನ್ನು ಕಂಡು ದಶರಥನ ಹೆಂಡತಿಯಾದ ಕೈಕೇಯೀದೇವಿಯು ಮೊದಲೇ ದಶರಥನು ವರವನ್ನು ಕೊಟ್ಟಿದ್ದರಿಂದ ರಾಮನನ್ನು ದೇಶದಿಂದ ವನಕ್ಕೆ ಹೊರಡಿಸುವದು, ಮತ್ತು ಭರತನ ಅಭಿಷೇಕ - ಎಂಬೀ ವರಗಳನ್ನು ಬೇಡಿಕೊಂಡಳು.

ಆ ರಾಜನಾದ ದಶರಥನು ಸತ್ಯವಚನನಾಗಿದ್ದ ಕಾರಣ ಧರ್ಮಪಾಶದಿಂದ ಬದ್ಧನಾಗಿ ಪ್ರಿಯಪುತ್ರನಾದ ರಾಮನನ್ನು ವನವಾಸಕ್ಕೆ ಹೊರಡಿಸಿಬಿಟ್ಟನು.

## ರಾಮನು ವನವಾಸಕ್ಕೆ ತೆರಳಿದ್ದು

**ಸ ಜಗಾಮ ವನಂ ವೀರಃ ಪ್ರತಿಜ್ಞಾಮನುಪಾಲಯನ್ ।**
**ಪಿತುರ್ವಚನನಿರ್ದೇಶಾತ್ ಕೈಕೇಯ್ಯಾಃ ಪ್ರಿಯಕಾರಣಾತ್ ॥ ೨೪ ॥**
**ತಂ ವ್ರಜನ್ತಂ ಪ್ರಿಯೋ ಭ್ರಾತಾ ಲಕ್ಷ್ಮಣೋಽನುಜಗಾಮ ಹ ।**
**ಸ್ನೇಹಾದ್ ವಿನಯಸಂಪನ್ನಃ ಸುಮಿತ್ರಾನನ್ದವರ್ಧನಃ ॥ ೨೫ ॥**
**ಭ್ರಾತರಂ ದಯಿತೋ ಭ್ರಾತುಃ ಸೌಭ್ರಾತ್ರಮನುದರ್ಶಯನ್ ।**

೨೪-೨೫. ಕೈಕೇಯಿಗೆ ಪ್ರಿಯವನ್ನು ಮಾಡುವದಕ್ಕಾಗಿ ತಂದೆಯ ಮಾತಿನ ಅಪ್ಪಣೆಯಂತೆ ವೀರನಾದ ರಾಮನು ತನ್ನ ಪ್ರತಿಜ್ಞೆಯನ್ನು ಕಾಪಾಡಿಕೊಳ್ಳುವದಕ್ಕಾಗಿ ವನಕ್ಕೆ ಹೊರಟುಹೋದನು.

ಹಾಗೆ ಹೋದ ಅಣ್ಣನನ್ನು ವಿನಯಸಂಪನ್ನನೂ ಸುಮಿತ್ರೆಯ ಆನಂದವನ್ನು ಬೆಳೆಯಿಸವವನೂ ರಾಮನ ಪ್ರೀತಿಯ ತಮ್ಮನೂ ಆದ ಲಕ್ಷ್ಮಣನು ಸ್ನೇಹದಿಂದಲೂ ಭ್ರಾತೃಪ್ರೇಮದಿಂದಲೂ ಕೂಡಿ ಹಿಂಬಾಲಿಸಿದನು.

## ಸೀತಾದೇವಿಯು ರಾಮನನ್ನು ಹಿಂಬಾಲಿಸಿದ್ದು

**ರಾಮಸ್ಯ ದಯಿತಾ ಭಾರ್ಯಾ ನಿತ್ಯಂ ಪ್ರಾಣಸಮಾ ಹಿತಾ ॥ ೨೬ ॥**
**ಜನಕಸ್ಯ ಕುಲೇ ಜಾತಾ ದೇವಮಾಯೇವ ನಿರ್ಮಿತಾ ।**
**ಸರ್ವಲಕ್ಷಣಸಂಪನ್ನಾ ನಾರೀಣಾಮುತ್ತಮಾ ವಧೂಃ ॥ ೨೭ ॥**
**ಸೀತಾಪ್ಯನುಗತಾ ರಾಮಂ ಶಶಿನಂ ರೋಹಿಣೀ ಯಥಾ ।**

೨೬-೨೭. ರಾಮನಿಗೆ ಪ್ರಿಯಪತ್ನಿಯೂ ನಿತ್ಯವೂ ಪ್ರಾಣದಂತೆ ಅವನಿಗೆ ಹಿತವನ್ನೇ ಬಯಸುವಾಕೆಯೂ ಆಗಿದ್ದ, ಜನಕನ ಕುಲದಲ್ಲಿ ಹುಟ್ಟಿದ್ದ - ನಿರ್ಮಾಣವಾದ ದೇವಮಾಯೆಯೋ ಎಂಬಂತಿದ್ದ - ಸರ್ವಲಕ್ಷಣಸಂಪನ್ನಳೂ ಸ್ತ್ರೀಯರಲ್ಲೆಲ್ಲ ಉತ್ತಮಳೂ ಆಗಿದ್ದ ಸೀತೆಯೂ ಚಂದ್ರನನ್ನು ರೋಹಿಣಿಯು ಹಿಂಬಾಲಿಸುವಂತೆ ಹಿಂದೆಯೇ ಹೊರಟಳು.

(ಇಲ್ಲಿ ಸೀತೆಯನ್ನು 'ದೇವಮಾಯೆಯಂತೆ' ಎಂದು ವರ್ಣಿಸಿರುವದು ಅನ್ವರ್ಥವಾಗಿದೆ.)

## ಗುಹಸಂಗಮ

**ಪೌರೈರನುಗತೋ ದೂರಂ ಪಿತ್ರಾ ದಶರಥೇನ ಚ ॥ ೨೮ ॥**
**ಶೃಙ್ಗವೇರಪುರೇ ಸೂತಂ ಗಙ್ಗಾಕೂಲೇ ವ್ಯಸರ್ಜಯತ್ ।**
**ಗುಹಮಾಸಾದ್ಯ ಧರ್ಮಾತ್ಮಾ ನಿಷಾದಾಧಿಪತಿಂ ಪ್ರಿಯಮ್ ॥ ೨೯ ॥**

೨೮-೨೯. ಪುರನಿವಾಸಿಗಳೂ ತಂದೆಯಾದ ದಶರಥನೂ ದೂರದವರೆಗೆ ಹಿಂದೆಯೇ ಬಂದರು. ಗಂಗಾನದಿಯ ದಡದಲ್ಲಿ ಶೃಂಗವೇರಪುರದಲ್ಲಿ

ನಿಷಾದರ ಒಡೆಯನಾದ ಪ್ರೀತಿಪಾತ್ರನಾಗಿದ್ದ ಗುಹನನ್ನು ಸೇರಿದಮೇಲೆ ಧರ್ಮಾತ್ಮನಾದ ರಾಮನು ಸಾರಥಿಯಾದ ಸುಮಂತ್ರನನ್ನು ಹಿಂದಕ್ಕೆ ಕಳುಹಿಸಿದನು.

**ಗುಹೇನ ಸಹಿತೋ ರಾಮೋ ಲಕ್ಷ್ಮಣೇನ ಚ ಸೀತಯಾ ।**
**ತೇ ವನೇನ ವನಂ ಗತ್ವಾ ನದೀಸ್ತೀರ್ತ್ವಾ ಬಹೂದಕಾಃ ॥ ೩೦ ॥**
**ಚಿತ್ರಕೂಟಮನುಪ್ರಾಪ್ಯ ಭರದ್ವಾಜಸ್ಯ ಶಾಸನಾತ್ ।**
**ರಮ್ಯಮಾವಸಥಂ ಕೃತ್ವಾ ರಮಮಾಣಾ ವನೇ ತ್ರಯಃ ॥ ೩೧॥**
**ದೇವಗನ್ಧರ್ವಸಙ್ಕಾಶಾಸ್ತತ್ರ ತೇ ನ್ಯವಸನ್ ಸುಖಮ್ ।**

೩೦-೩೧ ೧/೨. ಗುಹ, ಲಕ್ಷ್ಮಣ, ಸೀತೆ - ಇವರೊಡನೆ ರಾಮನು ಕೂಡಿದವನಾದನು. ಅವರು ವನದಿಂದ ವನಕ್ಕೆ ಹೋಗುತ್ತಾ ಬಹಳ ನೀರುಳ್ಳ ನದಿಗಳನ್ನು ದಾಟಿ, ಭರದ್ವಾಜರ ಅಪ್ಪಣೆಯಂತೆ ಚಿತ್ರಕೂಟವನ್ನು ಸೇರಿ ರಮ್ಯವಾದ ಪರ್ಣಶಾಲೆಯನ್ನು ಮಾಡಿಕೊಂಡು ದೇವಗಂಧರ್ವರಂತೆ ವನದಲ್ಲಿ ಕ್ರೀಡಿಸುತ್ತಾ ಆ ಮೂವರೂ ಸುಖವಾಗಿ ವಾಸಮಾಡಿಕೊಂಡಿದ್ದರು.

**ಚಿತ್ರಕೂಟಂ ಗತೇ ರಾಮೇ ಪುತ್ರಶೋಕಾತುರಸ್ತದಾ ॥ ೩೨ ॥**
**ರಾಜಾ ದಶರಥಃ ಸ್ವರ್ಗಂ ಜಗಾಮ ವಿಲಪನ್ ಸುತಮ್**

೩೨-೩೨ ೧/೨. ರಾಮನು ಚಿತ್ರಕೂಟವನ್ನು ಸೇರಲಾಗಿ (ಇತ್ತ) ದಶರಥ ರಾಜನು ಪುತ್ರಶೋಕದಿಂದ ವ್ಯಥೆಪಡುತ್ತಾ ಮಗನನ್ನು ಕುರಿತು ದುಃಖಿಸುತ್ತಾ ಸ್ವರ್ಗಕ್ಕೆ ತೆರಳಿದನು.

## ಭರತನಿಗೆ ಪಾದುಕಾಪ್ರದಾನ

**ಮೃತೇ ತು ತಸ್ಮಿನ್ ಭರತೋ ವಸಿಷ್ಠಪ್ರಮುಖೈರ್ದ್ವಿಜೈಃ ॥ ೩೩ ॥**
**ನಿಯುಜ್ಯಮಾನೋ ರಾಜ್ಯಾಯ ನೈಚ್ಛದ್ ರಾಜ್ಯಂ ಮಹಾಬಲಃ ।**
**ಸ ಜಗಾಮ ವನಂ ವೀರೋ ರಾಮಪಾದಪ್ರಸಾದಕಃ ॥ ೩೪ ॥**
**ಗತ್ವಾ ತು ಸ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।**
**ಅಯಾಚದ್ ಭ್ರಾತರಂ ರಾಮಮಾರ್ಯಭಾವಪುರಸ್ಕೃತಃ ॥ ೩೫ ॥**
**ತ್ವಮೇವ ರಾಜಾ ಧರ್ಮಜ್ಞ ಇತಿ ರಾಮಂ ವಚೋಽಬ್ರವೀತ್ ।**

೩೩-೩೫. ಆತನು ಸ್ವರ್ಗಕ್ಕೆ ತೆರಳಿದ ಬಳಿಕವಾದರೊ, ವಸಿಷ್ಠನೇ ಮೊದಲಾದ ಬ್ರಾಹ್ಮಣರು ಭರತನನ್ನು ರಾಜ್ಯಕ್ಕೆ ಗೊತ್ತುಮಾಡಿದ್ದರೂ ಮಹಾಬಲನಾದ ಭರತನಿಗೆ ರಾಜ್ಯವು ಬೇಕಾಗಿರಲಿಲ್ಲ. ಆ ವೀರನು ಪೂಜ್ಯನಾದ ಶ್ರೀರಾಮನನ್ನು ಪ್ರಸನ್ನಗೊಳಿಸಬೇಕೆಂಬ ಇಚ್ಛೆಯಿಂದ ವನಕ್ಕೆ ಹೋದನು. ಸತ್ಯಪರಾಕ್ರಮನಾದ ಮಹಾತ್ಮನಾದ ಅಣ್ಣನಾದ ಶ್ರೀರಾಮನನ್ನು ಆರ್ಯಭಾವದಿಂದ ಪ್ರಾರ್ಥಿಸಿಕೊಂಡನು. 'ಧರ್ಮಜ್ಞನೆ, ನೀನೇ ರಾಜನು' ಎಂದು ನುಡಿದನು.

**ರಾಮೋಽಪಿ ಪರಮೋದಾರಃ ಸುಮುಖಃ ಸುಮಹಾಯಶಾಃ ॥ ೩೬ ॥**
**ನ ಚೈಚ್ಛತ್ ಪಿತುರಾದೇಶಾತ್ ರಾಜ್ಯಂ ರಾಮೋ ಮಹಾಬಲಃ ।**
**ಪಾದುಕೇ ಚಾಸ್ಯ ರಾಜ್ಯಾಯ ನ್ಯಾಸಂ ದತ್ವಾ ಪುನಃ ಪುನಃ ॥ ೩೭ ॥**
**ನಿವರ್ತಯಾಮಾಸ ತತೋ ಭರತಂ ಭರತಾಗ್ರಜಃ ।**

೩೬-೩೭. ಎಲ್ಲರಿಗಿಂತಲೂ ಉದಾರನೂ ಪ್ರಸನ್ನಮುಖನೂ ಅತ್ಯಂತ ಯಶಸ್ವಿಯೂ ಮಹಾಬಲನೂ ಆದ ರಾಮನು ಕೂಡ ತಂದೆಯ ಅಪ್ಪಣೆಯನ್ನು ಮೀರಲಾರದೆ ಇದ್ದದ್ದರಿಂದ ರಾಜ್ಯವನ್ನು ಇಚ್ಛಿಸಲಿಲ್ಲ. ಆ ಭರತಾಗ್ರಜನು ರಾಜ್ಯಭಾರಕ್ಕೆ ತನ್ನ ಪಾದುಕೆಗಳನ್ನು ಅವನಿಗೆ ನ್ಯಾಸವಾಗಿ ಕೊಟ್ಟು ಬಳಿಕ ಮತ್ತೆ ಮತ್ತೆ ಸಮಾಧಾನಪಡಿಸಿ ಭರತನನ್ನು ಹಿಂತಿರುಗಿಸಿದನು.

**ಸ ಕಾಮಮನವಾಪ್ಯೈವ ರಾಮಪಾದಾವುಪಸ್ಪೃಶನ್ ॥ ೩೮ ॥**
**ನನ್ದಿಗ್ರಾಮೇಽಕರೋದ್ ರಾಜ್ಯಂ ರಾಮಾಗಮನಕಾಙ್ಕ್ಷಯಾ ।**

೩೮-೩೯. ತನ್ನ ಅಭಿಲಾಷೆಯನ್ನು ಪೂರ್ಣಗೊಳಿಸಿಕೊಳ್ಳದೆಯೇ ಆ (ಭರತನು) ರಾಮನ ಪಾದಗಳಿಗೆರಗಿ, ರಾಮನು ಬರುವನೆಂಬ ಪ್ರತೀಕ್ಷೆಯಿಂದ ನಂದಿಗ್ರಾಮದಲ್ಲಿದ್ದುಕೊಂಡು ರಾಜ್ಯವನ್ನು ಆಳುತ್ತಿದ್ದನು.

## ದಂಡಕಾಪ್ರವೇಶ

**ಗತೇ ತು ಭರತೇ ಶ್ರೀಮಾನ್ ಸತ್ಯಸನ್ಧೋ ಜಿತೇನ್ದ್ರಿಯಃ ॥ ೩೯ ॥**
**ರಾಮಸ್ತು ಪುನರಾಲಕ್ಷ್ಯ ನಾಗರಸ್ಯ ಜನಸ್ಯ ಚ ।**
**ತತ್ರಾಗಮನಮೇಕಾಗ್ರೋ ದಣ್ಡಕಾನ್ ಪ್ರವಿವೇಶ ಹ ॥ ೪೦ ॥**

೩೯-೪೦. ಭರತನು ಹಿಂತೆರಳಿದ ಮೇಲಾದರೆ ಇತ್ತ ಸತ್ಯಸಂಧನೂ ಜಿತೇಂದ್ರಿಯನೂ ಆದ ಶ್ರೀಮಾನ್ ರಾಮನು ನಗರದ ಜನರು ಅಲ್ಲಿಗೆ ಬರಬಹುದೆಂಬುದನ್ನು ಏಕಾಗ್ರತೆಯಿಂದ ಮನದಂದುಕೊಂಡು ದಂಡಕಾರಣ್ಯ ಭಾಗಗಳನ್ನು ಪ್ರವೇಶಿಸಿದನು.

**ಪ್ರವಿಶ್ಯ ತು ಮಹಾರಣ್ಯಂ ರಾಮೋ ರಾಜೀವಲೋಚನಃ ।**
**ವಿರಾಧಂ ರಾಕ್ಷಸಂ ಹತ್ವಾ ಶರಭಙ್ಗಂ ದದರ್ಶ ಹ ॥ ೪೧ ॥**
**ಸುತೀಕ್ಷ್ಣಂ ಚಾಪ್ಯಗಸ್ತ್ಯಂ ಚ ಅಗಸ್ತ್ಯಭ್ರಾತರಂ ತಥಾ ।**
**ಅಗಸ್ತ್ಯವಚನಾಚ್ಚೈವ ಜಗ್ರಾಹೈನ್ದ್ರಂ ಶರಾಸನಮ್ ॥ ೪೨ ॥**
**ಖಡ್ಗಂ ಚ ಪರಮಪ್ರೀತಸ್ತೂಣೀ ಚಾಕ್ಷಯಸಾಯಕೌ ।**

೪೧-೪೨. ಆ ಮಹಾರಣ್ಯವನ್ನು ಪ್ರವೇಶಮಾಡಿದಮೇಲೆ ಕಮಲ ನೇತ್ರನಾದ ರಾಮನು ವಿರಾಧನೆಂಬ ರಾಕ್ಷಸನನ್ನು ಕೊಂದು ಶರಭಂಗನ ದರ್ಶನವನ್ನು ಮಾಡಿಕೊಂಡನು. ಸುತೀಕ್ಷ್ಣರನ್ನೂ, ಅಗಸ್ತ್ಯರನ್ನೂ, ಅಗಸ್ತ್ಯ ಭ್ರಾತೃವನ್ನೂ ದರ್ಶನಮಾಡಿದನು; ಮತ್ತು ಅಗಸ್ತ್ಯರ ವಚನದಂತೆಯೇ ಇಂದ್ರನ ಮಹಾಧನುಸ್ಸನ್ನೂ ಖಡ್ಗವನ್ನೂ ಎಂದಿಗೂ ಸವೆಯದ ಬಾಣಗಳುಳ್ಳ ಎರಡು ಬತ್ತಳಿಕೆಗಳನ್ನೂ ಪರಮಹರ್ಷದಿಂದ ಸ್ವೀಕರಿಸಿದನು.

## ಋಷಿಗಳಿಗೆ ಅಭಯಪ್ರದಾನ

**ವಸತಸ್ತಸ್ಯ ರಾಮಸ್ಯ ವನೇ ವನಚರೈಃ ಸಹ ॥ ೪೩ ॥**
**ಋಷಯೋಽಭ್ಯಾಗಮನ್ ಸರ್ವೇ ವಧಾಯಾಸುರರಕ್ಷಸಾಮ್ ।**
**ಸ ತೇಷಾಂ ಪ್ರತಿಶುಶ್ರಾವ ರಾಕ್ಷಸಾನಾಂ ತಥಾ ವನೇ ॥ ೪೪ ॥**
**ಪ್ರತಿಜ್ಞಾತಶ್ಚ ರಾಮೇಣ ವಧಃ ಸಂಯತಿ ರಕ್ಷಸಾಮ್ ।**
**ಋಷೀಣಾಮಗ್ನಿಕಲ್ಪಾನಾಂ ದಣ್ಡಕಾರಣ್ಯವಾಸಿನಾಮ್ ॥ ೪೫ ॥**

೪೩-೪೫. ಆ ರಾಮನು ಅಲ್ಲಿ ವನಚರರೊಡನೆ ವಾಸಮಾಡಿ ಕೊಂಡಿರುವಲ್ಲಿ ಸಕಲಋಷಿಗಳೂ ಅಸುರರ ಮತ್ತು ರಾಕ್ಷಸರ ವಧೆಯನ್ನು ಮಾಡಬೇಕೆಂದು ಕೇಳಿಕೊಳ್ಳುವದಕ್ಕೆಂದು ಬಂದರು. ಆತನು ಆಗ ವನದಲ್ಲಿ ರಾಕ್ಷಸರ ವಧೆಯನ್ನು ಮಾಡುವೆನೆಂದು ವಚನವನ್ನು ಕೊಟ್ಟನು. ಅಗ್ನಿಯಂತೆ

ತೇಜಸ್ವಿಗಳಾಗಿದ್ದ ದಂಡಕಾರಣ್ಯವಾಸಿಗಳಾದ ಋಷಿಗಳ ಮುಂದೆ 'ಯುದ್ಧದಲ್ಲಿ ರಾಕ್ಷಸರ ವಧೆಯನ್ನು ಮಾಡುವೆನು' ಎಂದು ಪ್ರತಿಜ್ಞೆಯನ್ನು ಮಾಡಿದನು.

## ಶೂರ್ಪಣಖಿಯ ವಿರೂಪಕರಣ, ಖರದೂಷಣಾದಿಗಳ ಸಂಹಾರ

**ತೇನ ತತ್ರೈವ ವಸತಾ ಜನಸ್ಥಾನನಿವಾಸಿನೀ ।**
**ವಿರೂಪಿತಾ ಶೂರ್ಪಣಖಾ ರಾಕ್ಷಸೀ ಕಾಮರೂಪಿಣೀ ॥ ೪೬ ॥**
**ತತಃ ಶೂರ್ಪಣಖಾವಾಕ್ಯಾದುದ್ಯುಕ್ತಾನ್ ಸರ್ವರಾಕ್ಷಸಾನ್ ।**
**ಖರಂ ತ್ರಿಶಿರಸಂ ಚೈವ ದೂಷಣಂ ಚೈವ ರಾಕ್ಷಸಮ್ ॥ ೪೭ ॥**
**ನಿಜಘಾನ ರಣೇ ರಾಮಸ್ತೇಷಾಂ ಚೈವ ಪದಾನುಗಾನ್ ।**
**ವನೇ ತಸ್ಮಿನ್ ನಿವಸತಾ ಜನಸ್ಥಾನನಿವಾಸಿನಾಮ್ ॥ ೪೮ ॥**
**ರಕ್ಷಸಾಂ ನಿಹತಾನ್ಯಾಸನ್ ಸಹಸ್ರಾಣಿ ಚತುರ್ದಶ ।**

೪೬-೪೮. ಅಲ್ಲಿಯೇ ಅವನು ವಾಸಮಾಡಿಕೊಂಡಿರುವಾಗ ಜನಸ್ಥಾನದಲ್ಲಿ ನಿವಾಸಮಾಡಿಕೊಂಡಿದ್ದ ಶೂರ್ಪಣಖಿ ಎಂಬ ಕಾಮರೂಪಿಣಿಯಾದ ರಾಕ್ಷಸಿಯನ್ನು ವಿರೂಪಗೊಳಿಸಿದನು. ಆಮೇಲೆ ಶೂರ್ಪಣಖಿಯ ಮಾತಿನಿಂದ ಯುದ್ಧಕ್ಕೆ ಎದ್ದು ಬಂದ ಎಲ್ಲಾ ರಾಕ್ಷಸರನ್ನೂ - ಖರ, ತ್ರಿಶಿರ, ದೂಷಣನೆಂಬ ರಾಕ್ಷಸ - ಇವರನ್ನೂ - ರಾಮನು ರಣದಲ್ಲಿ ವಧಿಸಿದನು ; ಅವರ ಬೆಂಬಲಿಗರನ್ನೂ ಕೊಂದನು. ಆ ವನದಲ್ಲಿ ವಾಸಮಾಡಿಕೊಂಡಿರುವಾಗ ಜನಸ್ಥಾನನಿವಾಸಿಗಳಾದ ಹದಿನಾಲ್ಕು ಸಾವಿರ ರಕ್ಕಸರು ಹತರಾದರು.

## ರಾವಣನು ಸೀತೆಯನ್ನು ಅಪಹರಿಸಿದ್ದು

**ತತೋ ಜ್ಞಾತಿವಧಂ ಶ್ರುತ್ವಾ ರಾವಣಃ ಕ್ರೋಧಮೂರ್ಛಿತಃ ॥ ೪೯ ॥**
**ಸಹಾಯಂ ವರಯಾಮಾಸ ಮಾರೀಚಂ ನಾಮ ರಾಕ್ಷಸಮ್ ।**
**ವಾರ್ಯಮಾಣಃ ಸುಬಹುಶೋ ಮಾರೀಚೇನ ಸ ರಾವಣಃ ॥ ೫೦ ॥**
**ನ ವಿರೋಧೋ ಬಲವತಾ ಕ್ಷಮೋ ರಾವಣ ತೇನ ತೇ ।**
**ಅನಾದೃತ್ಯ ತು ತದ್ವಾಕ್ಯಂ ರಾವಣಃ ಕಾಲಚೋದಿತಃ ॥ ೫೧ ॥**

**ಜಗಾಮ ಸಹ ಮಾರೀಚಸ್ತಸ್ಯಾಶ್ರಮಪದಂ ತದಾ ।**
**ತೇನ ಮಾಯಾವಿನಾ ದೂರಮಪವಾಹ್ಯ ನೃಪಾತ್ಮಜೌ ॥ ೫೨ ॥**
**ಜಹಾರ ಭಾರ್ಯಾಂ ರಾಮಸ್ಯ ಗೃಧ್ರಂ ಹತ್ವಾ ಜಟಾಯುಷಮ್ ।**

೪೯-೫೨. ಬಳಿಕ ತನ್ನವರು ಹತರಾದ ಸುದ್ದಿಯನ್ನು ಕೇಳಿ ರಾವಣನು ಕ್ರೋಧದಿಂದ ಉಕ್ಕಿ ಮಾರೀಚನೆಂಬ ರಾಕ್ಷಸನನ್ನು ತನಗೆ ಸಹಾಯ ಮಾಡೆಂದು ಕೇಳಿಕೊಂಡನು. ಮಾರೀಚನು 'ರಾವಣನೆ, ಬಲವಂತನಾದ ಅವನೊಡನೆ ವಿರೋಧವು ನಿನಗೆ ಯುಕ್ತವಲ್ಲ' ಎಂದು ಬಹಳವಾಗಿ ತಡೆದರೂ ಅವನ ವಾಕ್ಯವನ್ನು ಅಸಡ್ಡೆಮಾಡಿ ಕಾಲಪ್ರೇರಿತನಾದ ರಾವಣನು ಮಾರೀಚನೊಡನೆ ಆ ಆಶ್ರಮಸ್ಥಾನಕ್ಕೆ ಆಗ ಹೋದನು. ಆ ಮಾಯಾವಿಯಾದ (ಮಾರೀಚನ ಮೂಲಕ) ರಾಜಪುತ್ರರಿಬ್ಬರನ್ನೂ ದೂರವಾಗಿ ಸಾಗಿಸಿ ಜಟಾಯುವೆಂಬ ಗೃಧ್ರವನ್ನು ಕೊಂದು ರಾಮನ ಭಾರ್ಯೆಯನ್ನು ಕದ್ದೊಯ್ದನು.

## ರಾಮನು ಶಬರಿಯ ಸತ್ಕಾರವನ್ನು ಸ್ವೀಕರಿಸಿದ್ದು

**ಗೃಧ್ರಂ ಚ ನಿಹತಂ ದೃಷ್ಟ್ವಾ ಹೃತಾಂ ಶ್ರುತ್ವಾ ಚ ಮೈಥಿಲೀಮ್ ॥ ೫೩ ॥**
**ರಾಘವಃ ಶೋಕಸನ್ತಪ್ತೋ ವಿಲಲಾಪಾಕುಲೇನ್ದ್ರಿಯಃ ।**
**ತತಸ್ತೇನೈವ ಶೋಕೇನ ಗೃಧ್ರಂ ದಗ್ಧ್ವಾ ಜಟಾಯುಷಮ್ ॥ ೫೪ ॥**
**ಮಾರ್ಗಮಾಣೋ ವನೇ ಸೀತಾಂ ರಾಕ್ಷಸಂ ಸಂದದರ್ಶ ಹ ।**
**ಕಬನ್ಧಂ ನಾಮ ರೂಪೇಣ ವಿಕೃತಂ ಘೋರದರ್ಶನಮ್ ॥ ೫೫ ॥**
**ತಂ ನಿಹತ್ಯ ಮಹಾಬಾಹುರ್ದದಾಹ ಸ್ವರ್ಗತಶ್ಚ ಸಃ ।**
**ಸ ಚಾಸ್ಯ ಕಥಯಾಮಾಸ ಶಬರೀಂ ಧರ್ಮಚಾರಿಣೀಮ್ ॥ ೫೬ ॥**
**ಶ್ರಮಣೀಂ ಧರ್ಮನಿಪುಣಾಮಭಿಗಚ್ಛೇತಿ ರಾಘವ ।**

೫೩-೫೬. ಪೆಟ್ಟುತಿಂದು ಬಿದ್ದಿದ್ದ ಗೃಧ್ರಜಟಾಯುವನ್ನು ಕಂಡು ಸೀತೆಯು ಅಪಹೃತಳಾದದ್ದನ್ನು ಕೇಳಿ ರಾಮನು ಶೋಕಸಂತಪ್ತನಾಗಿ ಇಂದ್ರಿಯಗಳೆಲ್ಲ ಆಕುಲಿತವಾಗುವಂತೆ ಅತ್ತನು. ಬಳಿಕ ಅದೇ ಶೋಕದಿಂದೆದ್ದ ಉರಿಯಿಂದ ಗೃಧ್ರಜಟಾಯುವನ್ನು ಸುಟ್ಟು ವನದಲ್ಲಿ ಸೀತೆಯನ್ನು ಹುಡುಕುತ್ತಾ ವಿಕಾರರೂಪದ, ನೋಡುವದಕ್ಕೆ ಭಯಂಕರನಾಗಿದ್ದ ಕಬಂಧನೆಂಬ ರಾಕ್ಷಸನನ್ನು

ಕಂಡನು. ಮಹಾಬಾಹುವಾದ ರಾಮನು ಅವನನ್ನು ಕೊಂದು ಸುಟ್ಟುಬಿಟ್ಟನು. ಅದರಿಂದ ಅವನು ಸ್ವರ್ಗಕ್ಕೆ ತೆರಳಿದನು. ಆ ಕಬಂಧನು 'ರಾಘವನೆ, ಶಬರಿ ಎಂಬ ಧರ್ಮಚಾರಿಣಿಯಾದ ಧರ್ಮನಿಪುಣಳಾದ ಶ್ರಮಣಿಯ ಬಳಿಗೆ ಹೋಗು' ಎಂದು ಹೇಳಿದನು.

**ಸೋಽಭ್ಯಗಚ್ಛನ್ಮಹಾತೇಜಾಃ ಶಬರೀಂ ಶತ್ರುಸೂದನಃ ॥ ೫೭ ॥**
**ಶಬರ್ಯಾ ಪೂಜಿತಃ ಸಮ್ಯಗ್ ರಾಮೋ ದಶರಥಾತ್ಮಜಃ ।**
**ಪಂಪಾತೀರೇ ಹನುಮತಾ ಸಙ್ಗತೋ ವಾನರೇಣ ಹ ॥ ೫೮ ॥**
**ಹನುಮದ್ವಚನಾಚ್ಚೈವ ಸುಗ್ರೀವೇಣ ಸಮಾಗತಃ ।**

೫೭-೫೮. ಆ ಮಹಾತೇಜಸ್ವಿಯೂ ಶತ್ರುಸಂಹಾರಕನೂ ಆದ ರಾಮನು ಶಬರಿಯ ಬಳಿಗೆ ಹೋದನು. ಆ ಶಬರಿಯಿಂದ ದಶರಥನ ಪುತ್ರನಾದ ರಾಮನು ಚೆನ್ನಾಗಿ ಪೂಜಿತನಾದನು. ಪಂಪಾತೀರದಲ್ಲಿ ಹನುಮಂತನೆಂಬ ವಾನರನೊಡನೆ ಅವನಿಗೆ ಸಮಾಗಮವಾಯಿತು. ಅವನು ಹನುಮಂತನ ವಚನದಿಂದಲೇ ಸುಗ್ರೀವನನ್ನು ಸೇರಿದನು.

## ಸುಗ್ರೀವಸಖ್ಯ

**ಸುಗ್ರೀವಾಯ ಚ ತತ್ಸರ್ವಂ ಶಂಸದ್ರಾಮೋ ಮಹಾಬಲಃ ॥ ೫೯ ॥**
**ಆದಿತಸ್ತದ್ಯಥಾವೃತ್ತಂ ಸೀತಾಯಾಶ್ಚ ವಿಶೇಷತಃ ।**
**ಸುಗ್ರೀವಶ್ಚಾಪಿ ತತ್ಸರ್ವಂ ಶ್ರುತ್ವಾ ರಾಮಸ್ಯ ವಾನರಃ ॥ ೬೦ ॥**
**ಚಕಾರ ಸಖ್ಯಂ ರಾಮೇಣ ಪ್ರೀತಶ್ಚೈವಾಗ್ನಿಸಾಕ್ಷಿಕಮ್ ।**

೫೯-೬೦. ಮಹಾಬಲಶಾಲಿಯಾದ ರಾಮನು ಅದೆಲ್ಲವನ್ನೂ ಅದರಲ್ಲಿಯೂ ಸೀತೆಯ ವಿಷಯವನ್ನೂ ಮೊದಲಿನಿಂದ ಆದದ್ದೆಲ್ಲವನ್ನೂ ಆದಂತೆಯೇ ಸುಗ್ರೀವನಿಗೆ ತಿಳಿಯಿಸಿದನು. ಆ ರಾಮನ ವೃತ್ತಾಂತವೆಲ್ಲವನ್ನೂ ಕೇಳಿ ವಾನರನಾದ ಸುಗ್ರೀವನು ಕೂಡ ಸಂತೋಷದಿಂದ ಅಗ್ನಿಸಾಕ್ಷಿಕವಾಗಿ ರಾಮನೊಡನೆ ಗೆಳೆತನವನ್ನು ಮಾಡಿಕೊಂಡನು.

**ತತೋ ವಾನರರಾಜೇನ ವೈರಾನುಕಥನಂ ಪ್ರತಿ ॥ ೬೧ ॥**
**ರಾಮಾಯಾವೇದಿತಂ ಸರ್ವಂ ಪ್ರಣಯಾದ್ದುಃಖಿತೇನ ಚ ।**
**ಪ್ರತಿಜ್ಞಾತಂ ಚ ರಾಮೇಣ ತದಾ ವಾಲಿವಧಂ ಪ್ರತಿ ॥ ೬೨ ॥**

ವಾಲಿನಶ್ಚ ಬಲಂ ತತ್ರ ಕಥಯಾಮಾಸ ವಾನರಃ ।
ಸುಗ್ರೀವಃ ಶಙ್ಕಿತಶ್ಚಾಸೀನ್ನಿತ್ಯಂ ವೀರ್ಯೇಣ ರಾಘವೇ ॥ ೬೩ ॥
ರಾಘವಪ್ರತ್ಯಯಾರ್ಥಂ ತು ದುನ್ದುಭೇಃ ಕಾಯಮುತ್ತಮಮ್ ।
ದರ್ಶಯಾಮಾಸ ಸುಗ್ರೀವೋ ಮಹಾಪರ್ವತಸನ್ನಿಭಮ್ ॥ ೬೪ ॥
ಉತ್ಸ್ಮಯಿತ್ವಾ ಮಹಾಬಾಹುಃ ಪ್ರೇಕ್ಷ್ಯ ಚಾಸ್ಥಿ ಮಹಾಬಲಃ ।
ಪಾದಾಙ್ಗುಷ್ಠೇನ ಚಿಕ್ಷೇಪ ಸಂಪೂರ್ಣಂ ದಶಯೋಜನಮ್ ॥ ೬೫ ॥
ಬಿಭೇದ ಚ ಪುನಸ್ತಾಲಾನ್ ಸಪ್ತೈಕೇನ ಮಹೇಷುಣಾ ।
ಗಿರಿಂ ರಸಾತಲಂ ಚೈವ ಜನಯನ್ ಪ್ರತ್ಯಯಂ ತದಾ ॥ ೬೬ ॥

೬೧-೬೬. ಬಳಿಕ ವಾನರರಾಜನಾದ ಸುಗ್ರೀವನು ಸ್ನೇಹದಿಂದಲೂ ದುಃಖಪೂರ್ವಕವಾಗಿಯೂ (ವಾಲಿಯೊಡನೆ) ವೈರವಾದ ಬಗೆಯನ್ನು ಹೇಳುತ್ತಾ ರಾಮನಿಗೆ ಎಲ್ಲವನ್ನೂ ತಿಳಿಯಿಸಿದನು. ಆಗ ರಾಮನು ವಾಲಿಯನ್ನು ಸಂಹರಿಸುವ ವಿಷಯದಲ್ಲಿ ಪ್ರತಿಜ್ಞೆಮಾಡಿದನು. ವಾನರ (ಸುಗ್ರೀವ)ನು ಆಗ ವಾಲಿಯ ಬಲವನ್ನು ಹೇಳಿದನು. ಸುಗ್ರೀವನಿಗೆ ರಾಮನ ವೀರ್ಯದ ಬಗೆಗೆ ನಿತ್ಯವೂ ಶಂಕೆಯಾಗಿತ್ತು. ರಾಮನಿಗೆ ತಿಳಿದಿರಲೆಂದು ಮಹಾಪರ್ವತದಂತಿದ್ದ ದುಂದುಭಿಯ ಮಹಾಶರೀರವನ್ನು ಅವನಿಗೆ ಸುಗ್ರೀವನು ತೋರಿಸಿದನು. ಮಹಾಬಲಿಷ್ಠನೂ ಮಹಾಬಾಹುವೂ ಆದ ರಾಮನು ಆ ಅಸ್ಥಿಪಂಜರವನ್ನು ನೋಡಿ ಹುಸಿನಗೆಯಿಂದ ತನ್ನ ಕಾಲಿನ ಹೆಬ್ಬೆರಳಿನಿಂದ ಸಂಪೂರ್ಣವಾಗಿ ಹತ್ತು ಯೋಜನದವರೆಗೆ ಹಾರಿಸಿದನು ; ಮತ್ತೆ ಒಂದೇ ಒಂದು ಮಹಾಬಾಣದಿಂದ ಸುಗ್ರೀವನಿಗೆ ಶ್ರದ್ಧೆಯುಂಟಾಗುವಂತೆ ಮಾಡುವದಕ್ಕಾಗಿ ಏಳು ತಾಳೆಯ ಮರಗಳನು ಕತ್ತರಿಸಿಬಿಟ್ಟನು; ಬೆಟ್ಟವೊಂದನ್ನು ರಸಾತಲಕ್ಕೆ ಇಳಿಸಿದನು.

## ವಾಲಿಯ ವಧೆ

ತತಃ ಪ್ರೀತಮನಾಸ್ತೇನ ವಿಶ್ವಸ್ತಃ ಸ ಮಹಾಕಪಿಃ ।
ಕಿಷ್ಕಿನ್ಧಾಂ ರಾಮಸಹಿತೋ ಜಗಾಮ ಚ ಗುಹಾಂ ತದಾ ॥ ೬೭
ತತೋಽಗರ್ಜದ್ ಹರಿವರಃ ಸುಗ್ರೀವೋ ಹೇಮಪಿಙ್ಗಲಃ ।
ತೇನ ನಾದೇನ ಮಹತಾ ನಿರ್ಜಗಾಮ ಹರೀಶ್ವರಃ ॥ ೬೮ ॥
ಅನುಮಾನ್ಯ ತದಾ ತಾರಾಂ ಸುಗ್ರೀವೇಣ ಸಮಾಗತಃ ।

**ನಿಜಘಾನ ಚ ತತ್ರೈನಂ ಶರೇಣೈಕೇನ ರಾಘವಃ ॥ ೬೯ ॥**

೬೭-೬೯. ಆಮೇಲೆ ಅದರಿಂದ ಮನಸ್ಸಿನಲ್ಲಿ ಸಂತುಷ್ಟನಾದ ಆ ಮಹಾಕಪಿಯು ನಂಬಿಕೆಯುಳ್ಳವನಾದನು. ಆಗ ರಾಮನೊಡನೆ ಕಿಷ್ಕಿಂಧೆಯ ಗುಹೆಗೆ ಹೋದನು. ಬಳಿಕ ಚಿನ್ನದಂತೆ ಪಿಂಗಲವರ್ಣನಾಗಿದ್ದ ಕಪಿಶ್ರೇಷ್ಠನಾದ ಸುಗ್ರೀವನು ಗರ್ಜನೆ ಮಾಡಿದನು. ಆ (ಗರ್ಜನೆಯ) ಮಹಾನಾದವನ್ನು ಕೇಳಿ ಕಪೀಶ್ವರನಾದ ವಾಲಿಯು ತಾರೆಯನ್ನು ಸಮಾಧಾನಗೊಳಿಸಿ ಹೊರಕ್ಕೆ ಬಂದು ಸುಗ್ರೀವನನ್ನು ಸೇರಿದನು. ರಾಮನು ಅಲ್ಲಿ ಇವನನ್ನು ಒಂದೇ ಬಾಣದಿಂದ ಸಂಹರಿಸಿದನು.

## ಸೀತಾನ್ವೇಷಣ

**ತತಃ ಸುಗ್ರೀವವಚನಾದ್ ಹತ್ವಾ ವಾಲಿನಮಾಹವೇ ।**
**ಸುಗ್ರೀವಮೇವ ತದ್ರಾಜ್ಯೇ ರಾಘವಃ ಪ್ರತ್ಯಪಾದಯತ್ ॥ ೭೦ ॥**
**ಸ ಚ ಸರ್ವಾನ್ ಸಮಾನೀಯ ವಾನರಾನ್ ವಾನರರ್ಷಭಃ ।**
**ದಿಶಃ ಪ್ರಸ್ಥಾಪಯಾಮಾಸ ದಿದೃಕ್ಷುರ್ಜನಕಾತ್ಮಜಾಮ್ ॥ ೭೧ ॥**

೭೦-೭೧. ಸುಗ್ರೀವನ ವಚನಾನುಸಾರವಾಗಿ ವಾಲಿಯನ್ನು ಯುದ್ಧದಲ್ಲಿ ಕೊಂದಬಳಿಕ ರಾಮನು ಅವನ ರಾಜ್ಯದಲ್ಲಿ ಸುಗ್ರೀವನನ್ನೇ ದೊರೆಯಾಗಿ ಗೊತ್ತುಮಾಡಿದನು. ಆ ವಾನರಶ್ರೇಷ್ಠನಾದ ಸುಗ್ರೀವನು ಕೂಡ ವಾನರರೆಲ್ಲರನ್ನೂ ಕರೆಯಿಸಿ ಜನಕಸುತೆಯಾದ ಸೀತೆಯನ್ನು ಕಂಡುಹಿಡಿಯುವದಕ್ಕಾಗಿ ಬೇರೆಬೇರೆಯ ದಿಕ್ಕುಗಳಿಗೆ ಕಳುಹಿಸಿಕೊಟ್ಟನು.

## ಹನುಮಂತನು ಸಮುದ್ರವನ್ನು ದಾಟಿ ಸೀತೆಯನ್ನು ಕಂಡದ್ದು

**ತತೋ ಗೃಧ್ರಸ್ಯ ವಚನಾತ್ ಸಂಪಾತೇರ್ಹನುಮಾನ್ ಬಲೀ ।**
**ಶತಯೋಜನವಿಸ್ತೀರ್ಣಂ ಪುಪ್ಲುವೇ ಲವಣಾರ್ಣವಮ್ ॥ ೭೨ ॥**
**ತತ್ರ ಲಙ್ಕಾಂ ಸಮಾಸಾದ್ಯ ಪುರೀಂ ರಾವಣಪಾಲಿತಾಮ್ ।**
**ದದರ್ಶ ಸೀತಾಂ ಧ್ಯಾಯನ್ತೀಮಶೋಕವನಿಕಾಂ ಗತಾಮ್ ॥ ೭೩ ॥**
**ನಿವೇದಯಿತ್ವಾಭಿಜ್ಞಾನಂ ಪ್ರವೃತ್ತಿಂ ವಿನಿವೇದ್ಯ ಚ ।**

**ಸಮಾಶ್ವಾಸ್ಯ ಚ ವೈದೇಹೀಂ ಮರ್ದಯಾಮಾಸ ತೋರಣಮ್ ॥ ೭೪ ॥**
**ಪಞ್ಚ ಸೇನಾಗ್ರಗಾನ್ ಹತ್ವಾ ಸಪ್ತ ಮನ್ತ್ರಿಸುತಾನಪಿ ।**
**ಶೂರಮಕ್ಷಂ ಚ ನಿಷ್ಪಿಷ್ಯ ಗ್ರಹಣಂ ಸಮುಪಾಗಮತ್ ॥ ೭೫ ॥**

೭೨-೭೫. ಆ ಬಳಿಕ ಸಂಪಾತಿಯೆಂಬ ಗೃಧ್ರನ ವಚನದಂತೆ ಬಲಿಷ್ಠನಾದ ಹನುಮಂತನು ನೂರು ಯೋಜನಗಳಷ್ಟು ವಿಸ್ತೀರ್ಣವಾದ ಲವಣ ಸಮುದ್ರವನ್ನು ನೆಗೆದು ದಾಟಿದನು. ಅಲ್ಲಿ ರಾವಣನು ಆಳುತ್ತಿದ್ದ ಲಂಕಾ ಪುರಿಯನ್ನು ಸೇರಿ ಅಶೋಕವನದಲ್ಲಿದ್ದು ಚಿಂತಾಮಗ್ನಳಾಗಿದ್ದ ಸೀತೆಯನ್ನು ಕಂಡನು. ಗುರುತಿನ ಉಂಗುರವನ್ನು ಕೊಟ್ಟು ರಾಮನ ವೃತ್ತಾಂತವನ್ನು ತಿಳಿಯಿಸಿ ಸೀತೆಯನ್ನು ಸಮಾಧಾನಗೊಳಿಸಿ ವನದ ದ್ವಾರವನ್ನು ನಾಶಗೊಳಿಸಿದನು. ಐದು ಜನ ಸೇನಾಪತಿಗಳನ್ನೂ ಏಳುಮಂದಿ ಮಂತ್ರಿಪುತ್ರರನ್ನೂ ಕೊಂದು ಶೂರನಾದ ಅಕ್ಷನನ್ನು ಅರೆದುಹಾಕಿ, ರಾಕ್ಷಸರಿಗೆ ಸೆರೆಯಾದನು.

## ಲಂಕೆಯನ್ನು ಸುಟ್ಟು ಸೀತಾವೃತ್ತಾಂತವನ್ನು ತಂದದ್ದು

**ಅಸ್ತ್ರೇಣೋನ್ಮುಕ್ತಮಾತ್ಮಾನಂ ಜ್ಞಾತ್ವಾ ಪೈತಾಮಹಾದ್ ವರಾತ್**
**ಮರ್ಷಯನ್ ರಾಕ್ಷಸಾನ್ ವೀರೋ ಯನ್ತ್ರಿಣಸ್ತಾನ್ ಯದೃಚ್ಛಯಾ ॥ ೭೬ ॥**
**ತತೋ ದಗ್ಧ್ವಾ ಪುರೀಂ ಲಙ್ಕಾಮೃತೇ ಸೀತಾಂ ಚ ಮೈಥಿಲೀಮ್**
**ರಾಮಾಯ ಪ್ರಿಯಮಾಖ್ಯಾತುಂ ಪುನರಾಯಾನ್ಮಹಾಕಪಿಃ ॥ ೭೭ ॥**
**ಸೋಽಭಿಗಮ್ಯ ಮಹಾತ್ಮಾನಂ ಕೃತ್ವಾ ರಾಮಂ ಪ್ರದಕ್ಷಿಣಮ್ ।**
**ನ್ಯವೇದಯದಮೇಯಾತ್ಮಾ ದೃಷ್ಟಾ ಸೀತೇತಿ ತತ್ತ್ವತಃ ॥ ೭೮ ॥**

೭೬-೭೮. ಬ್ರಹ್ಮನ ವರದಿಂದ ತಾನು ಬ್ರಹ್ಮಾಸ್ತ್ರದಿಂದ ಮುಕ್ತನಾಗಿರುವೆನೆಂದು ತಿಳಿದೂ ವೀರನಾದ ಮಹಾಕಪಿ ಹನುಮಂತನು ತನ್ನನ್ನು ಬಂಧಿಸಿದ್ದ ರಾಕ್ಷಸರನ್ನು ಸ್ವೇಚ್ಛೆಯಿಂದ ಸಹಿಸಿಕೊಂಡಿದ್ದನು. ಬಳಿಕ ಮೈಥಿಲಿಯಾದ ಸೀತಾದೇವಿಯ ಸ್ಥಾನವೊಂದನ್ನು ಬಿಟ್ಟು ಉಳಿದ ಲಂಕಾಪುರಿಯನ್ನು ಸುಟ್ಟು ರಾಮನಿಗೆ ಈ ಪ್ರಿಯವಾರ್ತೆಯನ್ನು ಹೇಳುವದಕ್ಕೆಂದು ಹಿಂತಿರುಗಿ ಬಂದನು ; ಮಹಾತ್ಮನಾದ ರಾಮನ ಬಳಿಗೆ ಬಂದು ಪ್ರದಕ್ಷಿಣೆ ಮಾಡಿ

ಅಪರಿಮಿತಬುದ್ಧಿಶಾಲಿಯಾದ ಆ ಹನುಮಂತನು 'ಕಂಡೆನು, ಸೀತೆಯನ್ನು' ಎಂದು ಇದ್ದದ್ದು ಇದ್ದಂತೆ ತಿಳಿಯಿಸಿದನು.

## ಸಮುದ್ರವನ್ನು ದಾಟಿ ರಾವಣನನ್ನು ಕೊಂದು ಸೀತೆಯನ್ನು ಪಡೆದುಕೊಂಡದ್ದು

**ತತಃ ಸುಗ್ರೀವಸಹಿತೋ ಗತ್ವಾ ತೀರಂ ಮಹೋದಧೇಃ**
**ಸಮುದ್ರಂ ಕ್ಷೋಭಯಾಮಾಸ ಶರೈರಾದಿತ್ಯಸಂನಿಭೈಃ ॥ ೭೯ ॥**
**ದರ್ಶಯಾಮಾಸ ಚಾಽಽತ್ಮಾನಂ ಸಮುದ್ರಃ ಸರಿತಾಂ ಪತಿಃ ।**
**ಸಮುದ್ರವಚನಾಚ್ಚೈವ ನಲಂ ಸೇತುಮಕಾರಯತ್ ॥ ೮೦ ॥**
**ತೇನ ಗತ್ವಾ ಪುರೀಂ ಲಙ್ಕಾಂ ಹತ್ವಾ ರಾವಣಮಾಹವೇ ।**
**ರಾಮಃ ಸೀತಾಮನುಪ್ರಾಪ್ಯ ಪರಾಂ ವ್ರೀಡಾಮುಪಾಗಮತ್ ॥ ೮೧ ॥**

೭೯-೮೧. ಬಳಿಕ ಸುಗ್ರೀವಸಮೇತನಾಗಿ ಮಹಾಸಾಗರದ ತೀರಕ್ಕೆ ಹೋಗಿ ಆದಿತ್ಯಸಮಾನಪ್ರಕಾಶವುಳ್ಳ ಶರಗಳಿಂದ ಸಮುದ್ರವನ್ನು ಕದಡಿದನು. ನದೀಪತಿಯಾದ ಸಮುದ್ರನು ತನ್ನ ದರ್ಶನವನ್ನು ಕೊಟ್ಟನು. ಸಮುದ್ರನ ವಚನಕ್ಕನುಸಾರವಾಗಿ ರಾಮನು ನಲನಿಂದ ಸೇತುವೆಯನ್ನು ಮಾಡಿಸಿದನು. ಆ ಮಾರ್ಗದಿಂದ ಲಂಕಾಪುರಿಗೆ ಹೋಗಿ ರಾವಣನನ್ನು ಯುದ್ಧದಲ್ಲಿ ಸಂಹರಿಸಿ ರಾಮನು ಸೀತೆಯನ್ನು ಪಡೆದುಕೊಂಡಮೇಲೆ ಬಹಳ ನಾಚಿಕೆಯನ್ನು ಹೊಂದಿದನು.

## ಅಗ್ನಿಪರೀಕ್ಷೆಯಿಂದ ಸೀತೆಯು ಪರಿಶುದ್ಧಳೆಂದು ನಿಶ್ಚಿತವಾದದ್ದು

**ತಾಮುವಾಚ ತತೋ ರಾಮಃ ಪರುಷಂ ಜನಸಂಸದಿ ।**
**ಅಮೃಷ್ಯಮಾಣಾ ಸಾ ಸೀತಾ ವಿವೇಶ ಜ್ವಲನಂ ಸತೀ ॥ ೮೨ ॥**
**ತತೋಽಗ್ನಿವಚನಾತ್ ಸೀತಾಂ ಜ್ಞಾತ್ವಾ ವಿಗತಕಲ್ಮಷಾಮ್ ।**
**ಕರ್ಮಣಾ ತೇನ ಮಹತಾ ತ್ರೈಲೋಕ್ಯಂ ಸಚರಾಚರಮ್ ॥ ೮೩ ॥**
**ಸದೇವರ್ಷಿಗಣಂ ತುಷ್ಟಂ ರಾಘವಸ್ಯ ಮಹಾತ್ಮನಃ ।**
**ಬಭೌ ರಾಮಃ ಸಂಪ್ರಹೃಷ್ಟಃ ಪೂಜಿತಃ ಸರ್ವದೈವತೈಃ ॥ ೮೪ ॥**

೮೨-೮೪. ಆಗ ರಾಮನು ಜನರ ಸಂದಣಿಯ ಮುಂದೆ ಆ ಸೀತೆಯನ್ನು ಕುರಿತು ಕಠಿನವಾಕ್ಕನ್ನಾಡಿದನು. ಅದನ್ನು ಸಹಿಸಲಾರದೆ ಆ ಸಾಧ್ವಿಯಾದ ಸೀತೆಯು ಅಗ್ನಿಯನ್ನು ಪ್ರವೇಶಿಸಿದಳು. ಬಳಿಕ ಅಗ್ನಿದೇವನ ವಚನದಿಂದ ಸೀತೆಯು ಪಾಪರಹಿತಳೆಂದು ಅರಿತು, ಆ ಮಹಾಕಾರ್ಯದಿಂದ ರಾಮನ ವಿಷಯಕ್ಕೆ ಚರಾಚರಪ್ರಾಣಿಗಳಿಂದೊಡಗೂಡಿದ ಮೂರು ಲೋಕವೂ ದೇವತೆಗಳ ಮತ್ತು ಋಷಿಗಳ ಸಮೂಹವು ಕೂಡ ಸಂತುಷ್ಟವಾಯಿತು ; ರಾಮನು ಸರ್ವದೇವತೆಗಳಿಂದಲೂ ಪೂಜಿತನಾಗಿ ಅತಿಹರ್ಷದಿಂದ ಪ್ರಕಾಶಿಸಿದನು.

## ವಿಭೀಷಣನಿಗೆ ಪಟ್ಟಾಭಿಷೇಕವನ್ನು ಮಾಡಿ ಅಯೋಧ್ಯೆಗೆ ಹೊರಟದ್ದು

**ಅಭಿಷಿಚ್ಯ ಚ ಲಙ್ಕಾಯಾಂ ರಾಕ್ಷಸೇನ್ದ್ರಂ ವಿಭೀಷಣಮ್**
**ಕೃತಕೃತ್ಯಸ್ತದಾ ರಾಮೋ ವಿಜ್ವರಃ ಪ್ರಮುಮೋದ ಹ ॥ ೮೫ ॥**
**ದೇವತಾಭ್ಯೋ ವರಂ ಪ್ರಾಪ್ಯ ಸಮುತ್ಥಾಪ್ಯ ಚ ವಾನರಾನ್ ।**
**ಅಯೋಧ್ಯಾಂ ಪ್ರಸ್ಥಿತೋ ರಾಮಃ ಪುಷ್ಪಕೇಣ ಸುಹೃದ್ವೃತಃ ॥ ೮೬ ॥**

೮೫-೮೬. ಲಂಕೆಯಲ್ಲಿ ರಾಕ್ಷಸೇಂದ್ರನಾದ ವಿಭೀಷಣನಿಗೆ ಪಟ್ಟಾಭಿಷೇಕವನ್ನು ಮಾಡಿಸಿ ಕೃತಕೃತ್ಯನಾದ ರಾಮನು ಯಾವ ಚಿಂತೆಯೂ ಇಲ್ಲದೆ ಪರಮಾನಂದಭರಿತನಾದನು. ದೇವತೆಗಳಿಂದ ವರವನ್ನು ಪಡೆದುಕೊಂಡು ಸತ್ತಿದ್ದ ವಾನರರನ್ನು ಸಂಜೀವನಗೊಳಿಸಿ ರಾಮನು ಸ್ನೇಹಿತರೊಡನೆ ಪುಷ್ಪಕದ ಮೇಲೆ ಅಯೋಧ್ಯೆಯ ಕಡೆಗೆ ಹೊರಟನು.

## ಭರದ್ವಾಜಾಶ್ರಮದ ಮಾರ್ಗದಿಂದ ನಂದಿಗ್ರಾಮಕ್ಕೆ ಪ್ರಯಾಣ

**ಭರದ್ವಾಜಾಶ್ರಮಂ ಗತ್ವಾ ರಾಮಃ ಸತ್ಯಪರಾಕ್ರಮಃ ।**
**ಭರತಸ್ಯಾನ್ತಿಕಂ ರಾಮೋ ಹನೂಮನ್ತಂ ವ್ಯಸರ್ಜಯತ್ ॥ ೮೭ ॥**
**ಪುನರಾಖ್ಯಾಯಿಕಾಂ ಜಲ್ಪನ್ ಸುಗ್ರೀವಸಹಿತಸ್ತದಾ ।**
**ಪುಷ್ಪಕಂ ತತ್ಸಮಾರುಹ್ಯ ನನ್ದಿಗ್ರಾಮಂ ಯಯೌ ತದಾ ॥ ೮೮ ॥**

೮೭-೮೮. ಸತ್ಯಪರಾಕ್ರಮನಾದ ರಾಮನು ಭರದ್ವಾಜಾಶ್ರಮಕ್ಕೆ ಹೋಗಿ ಹನುಮಂತನನ್ನು ಭರತನಬಳಿಗೆ ಕಳುಹಿಸಿಕೊಟ್ಟನು. ಆಗ ಮತ್ತೂ ಸುಗ್ರೀವನೊಡನೆ ಕಥಾವಾರ್ತೆಯನ್ನು ಕುರಿತು ಮಾತಾಡುತ್ತಾ ಆ ಪುಷ್ಪಕವನ್ನೇರಿ ನಂದಿಗ್ರಾಮಕ್ಕೆ ಹೋದನು.

## ಮತ್ತೆ ರಾಜ್ಯಪ್ರಾಪ್ತಿ

**ನನ್ದಿಗ್ರಾಮೇ ಜಟಾಂ ಹಿತ್ವಾ ಭ್ರಾತೃಭಿಃ ಸಹಿತೋಽನಘಃ ।**
**ರಾಮಃ ಸೀತಾಮನುಪ್ರಾಪ್ಯ ರಾಜ್ಯಂ ಪುನರವಾಪ್ತವಾನ್ ॥ ೮೯ ॥**

೮೯. ನಂದಿಗ್ರಾಮದಲ್ಲಿ ಜಟೆಯನ್ನು ಬಿಚ್ಚಿಸಿಕೊಂಡು ತಮ್ಮಂದಿರೊಡನೆ ಆ ಅನಘನಾದ ರಾಮನು ಸೀತೆಯನ್ನು ಹೊಂದಿ ರಾಜ್ಯವನ್ನು ಮತ್ತೆ ಪಡೆದುಕೊಂಡನು.

## ರಾಮರಾಜ್ಯದ ಪ್ರಶಂಸೆ

**ಪ್ರಹೃಷ್ಟಮುದಿತೋ ಲೋಕಸ್ತುಷ್ಟಃ ಪುಷ್ಟಃ ಸುಧಾರ್ಮಿಕಃ ।**
**ನಿರಾಮಯೋ ಹ್ಯರೋಗಶ್ಚ ದುರ್ಭಿಕ್ಷಭಯವರ್ಜಿತಃ ॥ ೯೦ ॥**
**ನ ಪುತ್ರಮರಣಂ ಕೇಚಿದ್ ದ್ರಕ್ಷ್ಯನ್ತಿ ಪುರುಷಾಃ ಕ್ವಚಿತ್ ।**
**ನಾರ್ಯಶ್ಚಾವಿಧವಾ ನಿತ್ಯಂ ಭವಿಷ್ಯನ್ತಿ ಪತಿವ್ರತಾಃ ॥ ೯೧ ॥**
**ನ ಚಾಗ್ನಿಜಂ ಭಯಂ ಕಿಞ್ಚಿನ್ನಾಪ್ಸು ಮಜ್ಜನ್ತಿ ಜನ್ತವಃ ।**
**ನ ವಾತಜಂ ಭಯಂ ಕಿಞ್ಚಿನ್ನಾಪಿ ಜ್ವರಕೃತಂ ತಥಾ ॥ ೯೨ ॥**
**ನ ಚಾಪಿ ಕ್ಷುದ್ಭಯಂ ತತ್ರ ನ ತಸ್ಕರಭಯಂ ತಥಾ ।**
**ನಗರಾಣಿ ಚ ರಾಷ್ಟ್ರಾಣಿ ಧನಧಾನ್ಯಯುತಾನಿ ಚ ॥ ೯೩ ॥**
**ನಿತ್ಯಂ ಪ್ರಮುದಿತಾಃ ಸರ್ವೇ ಯಥಾ ಕೃತಯುಗೇ ತಥಾ ।**

೯೦-೯೩. ಇನ್ನು ಜನವು ಹರ್ಷಾತಿಶಯದಿಂದೊಡಗೂಡಿ ಮೋದದಿಂದಿರುವರು. ತುಷ್ಟರಾಗಿ ಪುಷ್ಟರಾಗಿ ಅತ್ಯಂತಧಾರ್ಮಿಕರಾಗಿ ಶರೀರದ ದುಃಖವಾಗಲಿ ರೋಗವಾಗಲಿ ಇಲ್ಲದೆ ದುರ್ಭಿಕ್ಷದ ಅಂಜಿಕೆಯಿಲ್ಲದೆ ಇರುವರು. ಜನರು ಯಾರೂ ಪುತ್ರಮರಣವನ್ನು ಕಾಣದೆ ಇರುವರು. ಸ್ತ್ರೀಯರು ನಿತ್ಯವೂ

ಸುಮಂಗಲಿಯರಾಗಿ ಪತಿವ್ರತೆಯರಾಗಿ ಇರುವರು. ಬೆಂಕಿಯ ಅಂಜಿಕೆಯು ಸ್ವಲ್ಪವೂ ಇರುವದಿಲ್ಲ. ಜೀವರುಗಳು ನೀರಿನಲ್ಲಿ ಮುಳುಗಿ ಸಾಯದೆ ಇರುವರು. ಬಿರುಗಾಳಿಯ ಭಯವು ಒಂದಿಷ್ಟೂ ಇರುವದಿಲ್ಲ. ಜ್ವರದಿಂದಾದ ಅಂಜಿಕೆಯೂ ಇರುವದಿಲ್ಲ. ಆ ರಾಜ್ಯದಲ್ಲಿ ಹಸಿವೆಯ ಅಂಜಿಕೆಯಿರುವದಿಲ್ಲ ; ಕಳ್ಳಕಾಕರ ಅಂಜಿಕೆಯೂ ಇರುವದಿಲ್ಲ. ನಗರಗಳೂ ರಾಷ್ಟ್ರಗಳೂ ಧನಧಾನ್ಯಸಮೃದ್ಧವಾಗಿ ರುವವು. ಕೃತಯುಗದಲ್ಲಿ ಹೇಗೋ ಹಾಗೆಯೇ ಎಲ್ಲರೂ ಯಾವಾಗಲೂ ಪ್ರಮೋದದಿಂದೊಡಗೂಡಿರುವರು.

## ರಾಮನು ಮುಂದೆ ಬ್ರಹ್ಮಲೋಕಕ್ಕೆ ತೆರಳುವನು

**ಅಶ್ವಮೇಧಶತೈರಿಷ್ಟ್ವಾ ತಥಾ ಬಹುಸುವರ್ಣಕೈಃ ॥ ೯೪ ॥**
**ಗವಾಂ ಕೋಟ್ಯಯುತಂ ದತ್ವಾ ವಿದ್ವದ್ಭ್ಯೋ ವಿಧಿಪೂರ್ವಕಮ್ ।**
**ಅಸಙ್ಖ್ಯೇಯಂ ಧನಂ ದತ್ವಾ ಬ್ರಾಹ್ಮಣೇಭ್ಯೋ ಮಹಾಯಶಾಃ ॥ ೯೫ ॥**
**ರಾಜವಂಶಾನ್ ಶತಗುಣಾನ್ ಸ್ಥಾಪಯಿಷ್ಯತಿ ರಾಘವಃ ।**
**ಚಾತುರ್ವರ್ಣ್ಯಂ ಚ ಲೋಕೇಽಸ್ಮಿನ್ ಸ್ವೇ ಸ್ವೇ ಧರ್ಮೇ**
**ನಿಯೋಕ್ಷ್ಯತಿ ॥ ೯೬ ॥**
**ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।**
**ರಾಮೋ ರಾಜ್ಯಮುಪಾಸಿತ್ವಾ ಬ್ರಹ್ಮಲೋಕಂ ಪ್ರಯಾಸ್ಯತಿ ॥ ೯೭**

೯೪-೯೭. ಮಹಾಯಶಸ್ವಿಯಾದ ರಾಮನು ಬಹುಸುವರ್ಣನಾಣ್ಯಗಳ ದಕ್ಷಿಣೆಯುಳ್ಳ ನೂರು ಅಶ್ವಮೇಧಗಳನ್ನು ಮಾಡಿ ವಿಧಿಪೂರ್ವಕವಾಗಿ ವಿದ್ವಾಂಸರಾದ ಬ್ರಾಹ್ಮಣರಿಗೆ ಹತ್ತುಸಾವಿರಕೋಟಿ ಗೋವುಗಳನ್ನು ಕೊಟ್ಟು, ಬ್ರಾಹ್ಮಣರಿಗೆ ಅಪರಿಮಿತವಾದ ಧನವನ್ನು ದಾನಮಾಡಿ ಶತಗುಣರಾಜವಂಶಗಳನ್ನು ಸ್ಥಾಪಿಸುವನು. ನಾಲ್ಕು ವರ್ಣದವರನ್ನೂ ಅವರವರ ಧರ್ಮಗಳಲ್ಲಿ ನಿರತರಾಗುವಂತೆ ಮಾಡುವನು. ಹತ್ತುಸಾವಿರದಮೇಲೆ ಹತ್ತು ನೂರು ವರ್ಷಗಳವರೆಗೆ ರಾಮನು ರಾಜ್ಯಭಾರವನ್ನು ಮಾಡಿ ಬ್ರಹ್ಮ ಲೋಕಕ್ಕೆ ತೆರಳುವನು.

## ರಾಮಾಯಣಕಥೆಯ ಮಾಹಾತ್ಮ್ಯ

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಂಮಿತಮ್ ।
ಯಃ ಪಠೇದ್ ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೇ ॥ ೯೮ ॥
ಏತದಾಖ್ಯಾನಮಾಯುಷ್ಯಂ ಪಠನ್ ರಾಮಾಯಣಂ ನರಃ ।
ಸಪುತ್ರಪೌತ್ರಃ ಸಗಣಃ ಪ್ರೇತ್ಯ ಸ್ವರ್ಗೇ ಮಹೀಯತೇ ॥ ೯೯ ॥

ಪಠನ್ ದ್ವಿಜೋ ವಾಗೃಷಭತ್ವಮೀಯಾತ್
ಸ್ಯಾತ್ ಕ್ಷತ್ರಿಯೋ ಭೂಮಿಪತಿತ್ವಮೀಯಾತ್ ।
ವಣಿಗ್ ಜನಃ ಪಣ್ಯಫಲತ್ವಮೀಯಾ-
ಜ್ಜನಶ್ಚ ಶೂದ್ರೋಽಪಿ ಮಹತ್ತ್ವಮೀಯಾತ್ ॥ ೧೦೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ

ಬಾಲಕಾಣ್ಡೇ ಪ್ರಥಮಃ ಸರ್ಗಃ

೯೮-೧೦೦. ಇದು ಪವಿತ್ರವಾದದ್ದು, ಪಾಪನಾಶಕವಾದದ್ದು, ಪುಣ್ಯಪ್ರದವಾದದ್ದು, ವೇದಗಳಿಗೆ ಸಮಾನವಾದದ್ದು ; ಈ ರಾಮಚರಿತ್ರೆಯನ್ನು ಯಾವನು ಪಠಿಸುವನೋ ಅವನು ಸರ್ವಪಾಪಗಳಿಂದಲೂ ಪೂರ್ಣವಾಗಿ ಮುಕ್ತನಾಗುವನು.

ಈ ಆಖ್ಯಾನವು ದೀರ್ಘವಾದ ಆಯುಸ್ಸನ್ನು ಕೊಡತಕ್ಕದ್ದು. ರಾಮಾಯಣವನ್ನು ಪಠಿಸುವ ಮನುಷ್ಯನು ಮಕ್ಕಳುಮೊಮ್ಮಕ್ಕಳು, ಪರಿವಾರ-ಎಲ್ಲರೊಡನೆ ಶರೀರವನ್ನು ಬಿಟ್ಟು ತೆರಳಿದ ಬಳಿಕ ಸ್ವರ್ಗಲೋಕದಲ್ಲಿ ಮಹಾಮಹಿಮನಾಗುವನು. ಇದನ್ನು ಪಠಿಸುವ ಬ್ರಾಹ್ಮಣನು ವಿದ್ಯಾವಂತನಾಗುವನು, ಕ್ಷತ್ರಿಯನಾದರೆ ಭೂಮಿಪಾಲನಾಗುವನು, ವೈಶ್ಯಜನನಾದರೆ ಐಶ್ವರ್ಯಫಲವನ್ನು ಪಡೆಯುವನು, ಶೂದ್ರಜನನಾದರೆ ಮಹತ್ತ್ವವನ್ನು ಪಡೆದುಕೊಳ್ಳುವನು.

ಇಂತಿ ವಾಲ್ಮೀಕಿ ವಿರಚಿತವಾದ ಋಷಿಪ್ರೋಕ್ತವಾದ ಶ್ರೀಮದ್ರಾಮಾಯಣದಲ್ಲಿ
ಬಾಲಕಾಂಡದಲ್ಲಿ ಒಂದನೆಯ ಸರ್ಗವು ಸಂಪೂರ್ಣವಾಯಿತು.

# ಶ್ರೀರಾಮಮಂಗಳಾಶಂಸನಸ್ತೋತ್ರ

ಮಂಗಳಂ ಕೋಸಲೇನ್ದ್ರಾಯ ಮಹನೀಯಗುಣಾಬ್ಧಯೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಂಗಳಮ್ ॥ ೧ ॥

ವೇದವೇದಾನ್ತವೇದ್ಯಾಯ ಮೇಘಶ್ಯಾಮಲಮೂರ್ತಯೇ ।
ಪುಂಸಾಂ ಮೋಹನರೂಪಾಯ ಪುಣ್ಯಶ್ಲೋಕಾಯ ಮಂಗಳಮ್ ॥ ೨ ॥

ವಿಶ್ವಾಮಿತ್ರಾನ್ತರಜ್ಞಾಯ ಮಿಥಿಲಾನಗರೀಪತೇಃ ।
ಭಾಗ್ಯಾನಾಂ ಪರಿಪಾಕಾಯ ಭವ್ಯರೂಪಾಯ ಮಂಗಳಮ್ ॥ ೩ ॥

ಪಿತೃಭಕ್ತಾಯ ಸತತಂ ಭ್ರಾತೃಭಿಃ ಸಹ ಸೀತಯಾ ।
ವನ್ದಿತಾಖಿಲಲೋಕಾಯ ರಾಮಚನ್ದ್ರಾಯ ಮಂಗಳಮ್ ॥ ೪ ॥

ತ್ಯಕ್ತಸಾಕೇತವಾಸಾಯ ಚಿತ್ರಕೂಟವಿಹಾರಿಣೇ ।
ಸೇವ್ಯಾಯ ಸರ್ವಯಮಿನಾಂ ಧೀರೋದಾರಾಯ ಮಂಗಳಮ್ ॥ ೫ ॥

ವಿಪ್ರಲೋಕೈಕಪಾಲಾಯ ವಿರಾಧಾದ್ಯನ್ತಕಾಯ ಚ ।
ವಿರಕ್ತಾಯ ವಿಶಿಷ್ಟಾಯ ರಾಘವಾಯಾಸ್ತು ಮಂಗಳಮ್ ॥ ೬ ॥

ದಣ್ಡಕಾರಣ್ಯವಾಸಾಯ ಖಣ್ಡಿತಾಮರಶತ್ರವೇ ।
ಗೃಧ್ರರಾಜಾಯ ಭಕ್ತಾಯ ಮುಕ್ತಿದಾಯಾಸ್ತು ಮಂಗಳಮ್ ॥ ೭ ॥

ಸಾದರಂ ಶಬರೀದತ್ತಫಲಮೂಲಾಭಿಲಾಷಿಣೇ ।
ಸೌಲಭ್ಯಪರಿಪೂರ್ಣಾಯ ಸತ್ತ್ವೋದ್ಯುಕ್ತಾಯ ಮಂಗಳಮ್ ॥ ೮ ॥

ಹನೂಮತ್ಸಮವೇತಾಯ ಹರೀಶಾಭೀಷ್ಟದಾಯಿನೇ ।
ವಾಲಿಪ್ರಮಥನಾಯಾಸ್ತು ಮಹಾಧೀರಾಯ ಮಂಗಳಮ್ ॥ ೯ ॥

ಶ್ರೀಮತೇ ರಘುವೀರಾಯ ಸೇತೂಲ್ಲಂಘಿತಸಿನ್ಧವೇ ।
ಜಿತರಾಕ್ಷಸರಾಜಾಯ ರಣಧೀರಾಯ ಮಂಗಳಮ್ ॥ ೧೦ ॥

ಆಸಾದ್ಯ ನಗರೀಂ ದಿವ್ಯಾಮಭಿಷಿಕ್ತಾಯ ಸೀತಯಾ ।
ರಾಜಾಧಿರಾಜರಾಜಾಯ ರಾಮಭದ್ರಾಯ ಮಂಗಳಮ್ ॥ ೧೧ ॥

ವಿಭೀಷಣಕೃತೇ ಪ್ರೀತ್ಯಾ ವಿಶ್ವಾಭೀಷ್ಟಪ್ರದಾಯಿನೇ ।
ಜಾನಕೀಪ್ರಾಣನಾಥಾಯ ಸೀತಾರಾಮಾಯ ಮಂಗಳಮ್ ॥ ೧೨ ॥

## ಭಕ್ತರ ಪ್ರೇಮವನ್ನು ಉಕ್ಕೇರಿಸುವ
## ಕೆಲವು ಸ್ತೋತ್ರ , ಪದ, ಪದ್ಯ - ಗ್ರಂಥಗಳು

೧. **ಮುಕುಂದಮಾಲಾ :** ಕುಲಶೇಖರಾಚಾರ್ಯರಿಂದ ವಿರಚಿತವಾದ ಈ ಭಕ್ತಿ ಪ್ರಧಾನಸ್ತೋತ್ರವು ವಿಷ್ಣುಭಕ್ತರಿಗೆಲ್ಲ ಪ್ರಿಯವಾಗಿರುತ್ತದೆ. ಭಗವದ್ಭಕ್ತಿಯ ಮರ್ಮವನ್ನು ವಿವರಿಸುವ ಈ ಪದ್ಯಗಳು ಹಾಡಿ ನಲಿಯಲು ಯೋಗ್ಯವಾಗಿವೆ. ಮೂಲ, ಅರ್ಥ, ಪಾಠಾಂತರಗಳನ್ನೂ ಕೊಟ್ಟಿದೆ.

**(ಐದನೆಯ ಮುದ್ರಣ, ಪು. ಕ್ರೌನ್೪ + ೨೦ )**

೨. **ಶಿವನಾಮಾಷ್ಟೋತ್ತರಶತಕ :** ಸ್ಕಾಂದಪುರಾಣದ ಶಾಂಕರಸಂಹಿತೆಯ ಶಿವ ರಹಸ್ಯದಲ್ಲಿ ಗೌರೀನಾರಾಯಣಸಂವಾದರೂಪವಾಗಿರುವ ಸುಪ್ರಸಿದ್ಧ ಸ್ತೋತ್ರ ವಿದು. ಮೂಲದ ಶ್ಲೋಕಗಳನ್ನು ಕೊಟ್ಟು ಪ್ರತಿಯೊಂದು ನಾಮದ ಅರ್ಥ ವಿವರಣೆಯನ್ನೂ ಕೊಟ್ಟಿರುತ್ತದೆ. ಪುಸ್ತಕದ ಕೊನೆಯಲ್ಲಿ ಮತ್ತೆ ಪಾಠಕರ ಸೌಕರ್ಯಕ್ಕಾಗಿ ಅಷ್ಟೋತ್ತರದ ಸಂಸ್ಕೃತಮೂಲವನ್ನೂ ಪೂಜೆಮಾಡುವವರಿಗೆ ಅನುಕೂಲವಾಗಿರಲೆಂದು ಅಕಾರಾದಿಯ ಅನುಕ್ರಮದಲ್ಲಿ ಕೊಟ್ಟಿರುವ ಒಂದು ಪಟ್ಟಿಯೂ ಇದೆ. **(ಮೂರನೆಯ ಮುದ್ರಣ, ಪು. ಕ್ರೌನ್ ೪+೪೨)**

೩. **ಶಿವಕವಚ :** ಭದ್ರಾಯುವೆಂಬ ರಾಜಕುಮಾರನಿಗೆ ಋಷಭಯೋಗೀಶ್ವರರೆಂಬ ಮಹಾತ್ಮರು ಉಪದೇಶಿಸಿದ ಸ್ತೋತ್ರವಿದು. ಸ್ಕಾಂದಪುರಾಣದ ಬ್ರಹ್ಮೋತ್ತರ ಖಂಡದಿಂದ ಆರಿಸಿದ ಈ ಸುಪ್ರಸಿದ್ಧ ಸ್ತೋತ್ರವನ್ನು ಮೂಲ, ಅರ್ಥ, ವಿವರಣೆ - ಗಳ ಸಮೇತವಾಗಿ ಪ್ರಕಟಿಸಿದೆ.

**( ಐದನೆಯ ಮುದ್ರಣ, ಪು. ಕ್ರೌನ್ ೪+೫೬)**

೪. **ಶಿವಾನಂದಲಹರೀ :** ಹೆಸರಿಗೆ ತಕ್ಕಂತೆ ಶಿವಭಕ್ತರ ಹೃದಯದಲ್ಲಿ ಆನಂದದ ಹೆದ್ದೆರೆಗಳನ್ನು ಎಬ್ಬಿಸುವ ಭಕ್ತಿಪರವಾದ ಸ್ತೋತ್ರವಿದು. ಮೂಲ, ಭಾವಾರ್ಥ ವಿವರಣೆಗಳೊಂದಿಗೆ ಪ್ರಕಟವಾಗಿದೆ. ಪರಮೇಶ್ವರನ ಮೂರ್ತಿದರ್ಶನ, ಪೂಜೆ, ಮಂತ್ರಜಪ, ಸ್ತುತಿ, ಕೀರ್ತನೆ, ಸೇವೆ, ಧ್ಯಾನ - ಮುಂತಾದ ಬಗೆಬಗೆಯ ವಿಧಾನ ಗಳಿಂದ ಭಕ್ತನು ಹೇಗೆ ಆ ಪರವಸ್ತುವನ್ನು ತನ್ನ ಹೃದಯದಲ್ಲಿಟ್ಟು ಕೊಂಡು ಸತತ ವಾಗಿ ಆನಂದಪಡಬಹುದು ಎಂಬುದನ್ನು ಈ ಸ್ತೋತ್ರವು ತೋರಿಸಿ ಕೊಡುತ್ತದೆ.

**(ಎರಡನೆಯ ಮುದ್ರಣ, ಪು. ಡೆಮಿ ೪+೭೪)**

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

**ಅಧ್ಯಾತ್ಮಪ್ರಕಾಶಕಾರ್ಯಾಲಯ**
68, 2ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು - 28. ✆ : 6525548

**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ - 573 211
✆ : 08175-73820